
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಅರ್ಜೆಂಟೀನಾ ಮತ್ತು ಸ್ಪೇನ್ ನಡುವೆ ನಡೆಯುತ್ತಿರುವ 2026ನೇ ಸಾಲಿನ ಫಿಫಾ ವಿಶ್ವಕಪ್ ಫೈನಲ್ ಪಂದ್ಯ ವೀಕ್ಷಿಸಲು ಫುಟ್‌ಬಾಲ್ ಅಭಿಮಾನಿಗಳು ಮುಗಿಬಿದ್ದಿದ್ದು, ಟಿಕೆಟ್ ಬೆಲೆ ಗಗನಕ್ಕೇರಿದೆ.


19 ಜುಲೈ, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 128 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಆಚಾರ್ಯತ್ರಯರ ಬಗ್ಗೆ ನಾಲಿಗೆ ಹರಿಬಿಡುವ ಮುನ್ನ... » 2


ಆರ್ಥಿಕ ಸ್ವಾವಲಂಬನೆಯಿಂದ ವ್ಯವಹಾರ ನಿರ್ವಹಣೆ ಸಾಧ್ಯ » 3


ಸಂಪನ್ಮೂಲ ಬಳಕೆಗೆ ಅನುಮತಿ ನೀಡದ ಸರ್ಕಾರ » 4


# ದೇವೇಗೌಡರ ಪತ್ನಿ ಚೆನ್ನಮ್ಮ ವಿಧಿವಶ

## ಮಧ್ಯಾಹ್ನ ಸ್ವಗ್ರಾಮಕ್ಕೆ ಪಾರ್ಥೀವ ಶರೀರ | ನಾಳೆ ಮಾವಿನಕೆರೆಯಲ್ಲಿ ಅಂತ್ಯಸಂಸ್ಕಾರ

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ (85) ಅವರು ಶನಿವಾರ ಇಹಲೋಕ ತ್ಯಜಿಸಿದ್ದಾರೆ.

ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಜುಲೈ 15ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶುಕ್ರವಾರ ಅವರ ಆರೋಗ್ಯದಲ್ಲಿ ಸುಧಾರಣೆ ಆಗಿದೆ ಎಂದು ವೈದ್ಯರು ತಿಳಿಸಿದ್ದರಾದರೂ ಶನಿವಾರ ಸಂಜೆ ಕೊನೆಯುಸಿರೆಳೆದರು.

ಸುದೀರ್ಘ 72 ವರ್ಷಗಳ ಸಂಗಾತಿ ಚೆನ್ನಮ್ಮ ಅವರ ಅಗಲಿಕೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಣ್ಣೀರಿಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಮಕ್ಕಳುಮ, ಮೊಮ್ಮಕ್ಕಳು, ಗಣ್ಯರು ಮತ್ತು ಸಂಬಂಧಿಕರು ಮಣಿಪಾಲ್ ಆಸ್ಪತ್ರೆಗೆ ದೌಡಾಯಿಸಿ ಚೆನ್ನಮ್ಮ ಅವರ ಅಂತಿಮ ದರ್ಶನ ಪಡೆದರು. ಬಳಿಕ ಮೃತದೇಹವನ್ನು ಪದ್ಮನಾಭ ನಗರದ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಭಾನುವಾರ ಬೆಳಿಗ್ಗೆ ಸಾರ್ವಜನಿಕರಿಗೆ ಪದ್ಮನಾಭ ನಗರದ ಮೈದಾನದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಇರಲಿದೆ. ಮಧ್ಯಾಹ್ನದ ನಂತರ ಸ್ವಗ್ರಾಮ ಹೊಳೆನರಸೀಪುರದ ಹರದನಹಳ್ಳಿಗೆ ಪಾರ್ಥೀವ ಶರೀರ ತೆಗೆದುಕೊಂಡು



ಬರಲಾಗುವುದು. ಅಲ್ಲಿಯೇ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸೊಡಲಾಗುತ್ತದೆ. ಸೋಮವಾರ ಮಾವಿನಕೆರೆಯ ಜಮೀನಿನಲ್ಲಿ ಒಕ್ಕಲಿಗರ ಸಂಪ್ರದಾಯ ದಂತೆ ಅಂತ್ಯಕ್ರಿಯೆ ನೆರವೇರಲಿದೆ. ಈ ಬಗ್ಗೆ ಕುಟುಂಬಸ್ಥ ರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗು ವುದೆಂದು ಪುತ್ರ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

**ಪ್ರಧಾನಿ ನರೇಂದ್ರ ಮೋದಿ ಸಂತಾಪ**

ಚೆನ್ನಮ್ಮ ಅವರ ಅಗಲಿಕೆಗೆ ಪ್ರಧಾನಿ ನರೇಂದ್ರ ಮೋದಿ ಸೇರಿ ರಾಜಕೀಯ ನಾಯಕರು ಮತ್ತು ಗಣ್ಯರು ಸಂತಾಪ ಸೂಚಿಸಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡ ಅವರ ಪತ್ನಿ ಚೆನ್ನಮ್ಮ ನಿಧನದ ಸುದ್ದಿ ತೀವ್ರ ಆಘಾತ ಮತ್ತು ನೋವುಂಟು ಮಾಡಿದೆ. ಸಮಾಜ ಸೇವೆಯ ಮೇಲಿದ್ದ ಅವರ ಅಪಾರ ಕಾಳಜಿ ಹಾಗು ಅವರ ವಿನಮ್ರ ಸ್ವಭಾವ ಎಲ್ಲರ ಗೌರವಕ್ಕೆ ಪಾತ್ರವಾಗಿತ್ತು. ಈ ದುಃಖದ ಸಮಯ ದಲ್ಲಿ ಅವರ ನೋವಿನಲ್ಲಿ ನಾನೂ ಭಾಗಿಯಾಗಿದ್ದೇನೆ ಎಂದು ಪ್ರಧಾನಿ ಸಂತಾಪ ಸೂಚಿಸಿದ್ದಾರೆ.

**ಮುಖ್ಯಮಂತ್ರಿ ಶ್ರದ್ಧಾಂಜಲಿ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚೆನ್ನಮ್ಮ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ಅಪಾರ ಧೈವಭಕ್ತೆ ಯಾಗಿದ್ದ ಚೆನ್ನಮ್ಮನವರು ತುಂಬು ಕುಟುಂಬವನ್ನು ಸಾಕಿ ಸಲಹಿದ ಮಹಾನ್ ತಾಯಿ. ದೇವೇಗೌಡರು, ಕುಮಾರ



ಸ್ವಾಮಿ, ರೇವಣ್ಣ ಸೇರಿ ಅವರ ಕುಟುಂಬ ಸದಸ್ಯರ ರಾಜ ಕೀಯ ಮತ್ತು ಬದುಕಿನ ಏಳ್ಗೆಯ ಹಿಂದೆ ಚೆನ್ನಮ್ಮನವರ ಪರಿಶ್ರಮ ಅಡಗಿದೆ. ಅವರು ಆಸ್ಪತ್ರೆಯಿಂದ ಗುಣಮುಖ ರಾಗಿ ವಾಪಾಸ್ ಬರುತ್ತಾರೆಂದು ಎಲ್ಲರೂ ನಂಬಿಕೆ ಇಟ್ಟಿದ್ದರು. ಆ ನಂಬಿಕೆ ಸುಳ್ಳಾಗಿರುವುದಕ್ಕೆ ಬಹಳ ಬೇಸರ ವಾಗಿದೆ ಎಂದು ದುಃಖ ವ್ಯಕ್ತಪಡಿಸಿದ್ದಾರೆ.

ಸೋಮವಾರ ಸಕಲ ಸರ್ಕಾರಿ ಗೌರವದೊಂದಿಗೆ ಚೆನ್ನಮ್ಮ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

## ಚೆನ್ನಮ್ಮ ನಿಧನಕ್ಕೆ ಗಣ್ಯರ ಸಂತಾಪ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ ಅವರ ನಿಧನದ ಸುದ್ದಿ ತಿಳಿದು ಅಪಾರದುಃಖವಾಯಿತು. ಹೆಚ್.ಡಿ. ದೇವೇಗೌಡ ಅವರ ರಾಜಕೀಯ ಜೀವನದ ಪ್ರತಿಯೊಂದು ಹಂತದಲ್ಲೂ ಬೆನ್ನೆಲುಬಾಗಿ ನಿಂತು, ಅವರ ಜನಸೇವೆಯ ಪಯಣದಲ್ಲಿ ಬೆಂಬಲವಾಗಿ ಸದಾ ಸಹಕಾರ ನೀಡಿದ ಶ್ರೀಮತಿ ಚೆನ್ನಮ್ಮ ಅವರ ಪಾತ್ರ ಮಹತ್ವದ್ದಾಗಿದೆ.

ಸರಳತೆ, ಸೌಜನ್ಯ, ಕುಟುಂಬ ಮೌಲ್ಯಗಳು ಹಾಗು ಸಮಾಜಮುಖಿ ಮನೋಭಾವದಿಂದ ಅವರು ಎಲ್ಲರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದರು. ಹೆಚ್.ಡಿ. ದೇವೇಗೌಡರವರ ಸಾರ್ವಜನಿಕ ಬದುಕಿನ ಯಶಸ್ಸಿನ ಹಿಂದೆ ಅವರ ತ್ಯಾಗ, ಪ್ರೋತ್ಸಾಹ ಮತ್ತು ನಿಸ್ವಾರ್ಥ ಸಹಕಾರ ಮಹತ್ವದ ಪಾತ್ರ ವಹಿಸಿತ್ತು.

ದಿ॥ಚೆನ್ನಮ್ಮ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ. ಈ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ, ಅವರ ಕುಟುಂಬದ ಸದಸ್ಯರಿಗೆ ಹಾಗು ಅಪಾರ ಅಭಿಮಾನಿಗಳಿಗೆ ಕರುಣಿಸಲಿ ಎಂದು ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯವರಲ್ಲಿ ಪ್ರಾರ್ಥಿಸುತ್ತೇನೆ.

**– ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಶ್ರವಣಬೆಳಗೊಳ**



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪತ್ನಿ ಚೆನ್ನಮ್ಮನವರ ನಿಧನದಿಂದ ದುಃಖಿತನಾಗಿದ್ದೇನೆ. ಜನತಾ ಪರಿವಾರದಲ್ಲಿದ್ದ ನಾನು ದೇವೇಗೌಡರ ಕುಟುಂಬ ದೊಂದಿಗೆ ನಿಕಟವಾದ ಒಡನಾಟ ಇಟ್ಟು ಕೊಂಡವನಾಗಿ ಚೆನ್ನಮ್ಮನವರನ್ನು ಸಮೀಪ ದಿಂದ ಬಲ್ಲವನು.

ಚೆನ್ನಮ್ಮನವರು ತಮ್ಮ ಜೀವನದಲ್ಲಿ ಎದುರಾದ ಕಷ್ಟ-ನೋವುಗಳಿಂದ ಕುಗ್ಗದೆ, ಎಲ್ಲವನ್ನೂ ಧೈರ್ಯದಿಂದ ಎದುರಿಸಿದ್ದ ಗಟ್ಟಿಗಿತ್ತಿ. ದೇವೇಗೌಡರ ರಾಜಕೀಯ ಜೀವನದ ಏಳುಬೀಳಿನ ನಡುವೆ ದೊಡ್ಡ ಕುಟುಂಬವನ್ನು ಪೊರೆಯುತ್ತಾ ಬಂದ ಅವರು ಒಬ್ಬ ಆದರ್ಶ ಗೃಹಿಣಿ ಯಾಗಿದ್ದರು. ಮಾಜಿ ಪ್ರಧಾನಿಗಳ ಮಡದಿಯಾಗಿದ್ದರೂ ಯಾವ ಹಮ್ಮು ಬಿಮ್ಮು ಇಲ್ಲದೆ ಎಲ್ಲರನ್ನೂ ಅಕ್ಕರೆಯಿಂದ ಕಾಣುತ್ತಿದ್ದ ಚೆನ್ನಮ್ಮನವರು, ಮಾದರಿ ಸತಿಯಾಗಿ ತುಂಬು ಜೀವನ ಸಾಗಿಸಿದವರು.

ದೀರ್ಘಕಾಲದ ಸಂಗಾತಿಯನ್ನು ಈ ಇಳಿವಯಸ್ಸಿನಲ್ಲಿ ಕಳೆದುಕೊಂಡ ದೇವೇಗೌಡರಿಗೆ ದು:ಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತ ನೀಡಲಿ. ಗೌಡರ ಕುಟುಂಬ ಸದಸ್ಯರಿಗೆ ನನ್ನ ಸಂತಾಪಗಳು. ಅವರ ನೋವಿನಲ್ಲಿ ನಾನೂ ಭಾಗಿಯಾಗಿದ್ದೇನೆ. ಮೃತರ ಆತ್ಮಕ್ಕೆ ಚಿರಶಾಂತಿ ಲಭಿಸಲಿ.

**-ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ**



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಧರ್ಮಪತ್ನಿ ಹಾಗು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಯವರ ತಾಯಿ ಚೆನ್ನಮ್ಮನವರು ವಿಧಿವಶರಾದ ವಿಷಯ ತಿಳಿದು ಅತೀವ ದುಃಖವಾಗಿದೆ. ಗೌಡರ ಸುದೀರ್ಘ ರಾಜಕೀಯ ಜೀವನದ ಏಳು-ಬೀಳುಗಳಲ್ಲಿ ನಿರಂತ ರವಾಗಿ ಬೆಂಬಲ ವಾಗಿ ನಿಂತು, ಇಡೀ ಕುಟುಂಬಕ್ಕೆ ಮಾತೃ ಶಕ್ತಿಯಾಗಿದ್ದ ಸರಳ ಸಜ್ಜನಿಕೆಯ ತಾಯಿ ಚೆನ್ನಮ್ಮನವರ ಅಗಲಿಕೆ ಗೌಡರ ಇಡೀ ಕುಟುಂಬಕ್ಕೆ ದೊಡ್ಡ ನಷ್ಟವಾಗಿದೆ. ಭಗ ವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಹಾಗೂ ಶ್ರೀ ದೇವೇಗೌಡರು, ಶ್ರೀ ಕುಮಾರಸ್ವಾಮಿ ಮತ್ತು ಅವರ ಇಡೀ ಕುಟುಂಬಕ್ಕೆ ಈ ದುಃಖವನ್ನು ತಡೆದು ಕೊಳ್ಳುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ಓಂ ಶಾಂತಿ.

**-ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ**



ಹಿರಿಯರು, ಪೂಜ್ಯರೂ ಆದ ಚೆನ್ನಮ್ಮ ಅವರು ನಮ್ಮ ತಂದೆಯ ಕಾಲ ದಿಂದಲೂ ನಮ್ಮ ಕುಟುಂಬಕ್ಕೆ ಮಾರ್ಗ ದರ್ಶಕರಾಗಿದ್ದರು. ನಮ್ಮ ಕುಟುಂಬದ ಬಹುತೇಕರು ಅವರ ಕೈತುತ್ತು ತಿಂದು ಬೆಳೆದಿದ್ದೇವೆ. ಅವರ ಮಾರ್ಗ ದರ್ಶನ, ನೆರಳಿನಲ್ಲಿ ರಾಜಕೀಯ ಭವಿಷ್ಯ ಕಂಡು ಕೊಂಡಿದ್ದೇವೆ.

ಪೂಜ್ಯ ಅಪ್ಪಾಜಿ ದೇವೇಗೌಡರಿಗೆ ಚೆನ್ನಮ್ಮ ಅವರು ದೊಡ್ಡ ಬಲವಾಗಿದ್ದರು. ಅವರ ನಿಧನ ಅತೀವ ನೋವು ತರಿಸಿದೆ.

ಸದಾ ಸೌಮ್ಯ ಸ್ವಭಾವದವರಾಗಿದ್ದ ಚೆನ್ನಮ್ಮ ಅವರ ದೈವಭಕ್ತಿ, ಅವರು ದೊಡ್ಡ ಕುಟುಂಬ ವನ್ನು ದೊಡ್ಡ ಹಂತಕ್ಕೆ ಬೆಳೆಸಿದ ರೀತಿ ಪ್ರತಿಯೊಬ್ಬರಿಗೂ ಮಾದರಿ ಮತ್ತು ಪ್ರೇರಣೆ ಎಂದು ನಾನು ಭಾವಿಸುತ್ತೇನೆ. ಅವರ ಸೇವೆ ನಿಜಕ್ಕೂ ಸಾರ್ಥಕ. ಅವರ ಆತ್ಮಕ್ಕೆ ದೇವರು ಚಿರಶಾಂತಿ ಕರುಣಿಸಲಿ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ನಾಯಕರಾದ ಹೆಚ್.ಡಿ.ರೇವಣ್ಣ, ಕುಮಾರಣ್ಣ ಅವರಿಗೆ, ಶ್ರೀಮತಿ ಭವಾನಿ ರೇವಣ್ಣ ಹಾಗು ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಡಾ. ಸೂರಜ್ ರೇವಣ್ಣ ಸೇರಿ ಸಮಸ್ತ ಕುಟುಂಬ ಸದಸ್ಯ ರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. **-ಹೆಚ್.ಪಿ.ಸ್ವರೂಪ್, ಶಾಸಕ**

## ರೇವಣ್ಣ ದೈವ ಭಕ್ತರಾಗಲು ಇದೇ ಕಾರಣ!

ಕೂರಲು, ನಿಲ್ಲಲು ಗಳಿಗೆ, ಶಾಸ್ತ್ರ ನೋಡುವ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಧಾರ್ಮಿಕ ನಂಬಿಕೆಗಳು ಇಷ್ಟೊಂದು ದೃಢವಾಗಲು ಚೆನ್ನಮ್ಮ ಅವರ ಮೇಲಿನ ಆ್ಯಸಿಡ್ ದಾಳಿ ಪ್ರಕರಣವೂ ಪ್ರಮುಖ ಕಾರಣ ಎನ್ನುತ್ತಾರೆ ಅವರ ಕುಟುಂಬದ ನಿಕಟವರ್ತಿಗಳು. ಚೆನ್ನಮ್ಮ ಅವರು ಗಂಭೀರ ಆ್ಯಸಿಡ್ ದಾಳಿಯಲ್ಲಿ ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ದೀರ್ಘ ಹೋರಾಟ ನಡೆಸುತ್ತಾ ಮಲಗಿದ್ದರು. ಅವರ ತಲೆ ಮೇಲೆ ಸುರಿದ ಆ್ಯಸಿಡ್ ಅವರ ತಲೆ ಹಾಗು ಮುಖದ ಒಂದು ಭಾಗವನ್ನೇ ಸುಟ್ಟು ಹಾಕಿತ್ತು.

ಆಗ ಜ್ಯೋತಿಷ್ಯರ ಮೊರೆ ಹೋದ ಹೆಚ್.ಡಿ.ರೇವಣ್ಣ, ಪ್ರತಿದಿನ ಬೆಳಗಿನ ಜಾವಕ್ಕೆ ಎದ್ದು ಜ್ಯೋತಿಷ್ಯರು ಸೂಚಿಸಿದ ದೇವಾಲಯಗಳಿಗೆ ತೆರಳಿ ಗಂಟೆಗಟ್ಟಲೆ ಕುಳಿತು ಪೂಜೆ ಸಲ್ಲಿಸುತ್ತಿದ್ದರು. ನಂತರ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಾ ಪ್ರಜ್ಞಾಶೂನ್ಯ ರಾಗಿ ಮಲಗಿರುತ್ತಿದ್ದ ತಾಯಿಯ ಹಣೆಗೆ ಕುಂಕುಮ ಇರಿಸಿ ಹಾಸಿಗೆ ಪಕ್ಕವೇ ಕುಳಿತು ದೇವರ ಜಪ ಮಾಡುತ್ತಿದ್ದರು.

ದೀರ್ಘಕಾಲೀನ ಚಿಕಿತ್ಸೆ, ಶಸ್ತ್ರ ಚಿಕಿತ್ಸೆಗಳ ನಂತರ ಸಾವನ್ನು ಗೆದ್ದು ಬಂದ ಚೆನ್ನಮ್ಮ ಅವರು ಮಾಮೂಲಿ ಜೀವನಕ್ಕೆ ಮರಳಿದರು. ಈ ಚಮತ್ಕಾರಕ್ಕೆ ದೇವರ ಅನುಗ್ರಹವೇ ಕಾರಣ ಎಂದು ದೃಢವಾಗಿ ನಂಬಿದ ಪುತ್ರ ರೇವಣ್ಣ, ಮಹಾನ್ ದೈವ ಭಕ್ತರಾಗಿ ಬದಲಾದರು. ಜ್ಯೋತಿಷ್ಯ, ಪೂಜೆ, ಪುನಸ್ಕಾರಗಳ ಮೇಲೆ ಬಲವಾದ ನಂಬಿಕೆ ಬೆಳಸಿಕೊಂಡರು ಎನ್ನುತ್ತಾರೆ ಅವರ ಸಹಚರರು.

# ದೇವೇಗೌಡರ ಬದುಕಿನ ಶಕ್ತಿಯಾಗಿದ್ದ ಚೆನ್ನಮ್ಮ

- ಸಭ್ಯತೆಯ ಗೆರೆ ದಾಟದ ಆದರ್ಶ ಮಹಿಳೆ
- ತೆರೆ ಮರೆಯಲ್ಲೇ ಇಡೀ ಕುಟುಂಬ ನಿರ್ವಹಣೆ

• ಪ್ರಜೋದಯ ವರದಿ

**ಹಾಸನ:** ಹಳ್ಳಿಯಿಂದ ಕೆಂಪುಕೋಟೆ ಯವರೆಗಿನ ಹೆಚ್.ಡಿ.ದೇವೇಗೌಡರ ಐತಿಹಾಸಿಕ ಪಯಣದಲ್ಲಿ ಸದಾ ಶಕ್ತಿಯಾಗಿ, ಸಭ್ಯತೆಯ ಗೆರೆ ದಾಟದೆ ಬದುಕಿದ ಚೆನ್ನಮ್ಮ ಅವರ ಜೀವನ ಇಂದಿನ ತಲೆಮಾರಿಗೆ ಆದರ್ಶಪ್ರಾಯ ಸಂದೇಶವಾಗಿದೆ.

ದೇವೇಗೌಡರ ರಾಜಕೀಯ ಏಳು-ಬೀಳುಗಳಲ್ಲಿ ನೆರಳಾಗಿ ನಿಂತು, ಪತಿ ಪ್ರಧಾನಿಯಾದರೂ ಎಂದಿಗೂ ರಾಜ ಕೀಯದಲ್ಲಿ ಮೂಗು ತೂರಿಸದೆ, ಇಡೀ ಕುಟುಂಬವನ್ನು ಅಮ್ಮನಾಗಿ, ಅಜ್ಜಿಯಾಗಿ ಸಲಹಿದ್ದ ಅವರ ನಿಧನ ಅತೀವ ದುಃಖ ತರಿಸಿದೆ.

ಚೆನ್ನಮ್ಮ ಕೇವಲ ಪತ್ನಿಯಷ್ಟೇ ಅಲ್ಲ, ನನ್ನ ಪಾಲಿನ ತಾಯಿಯೂ ಹೌದು ಎಂದು ಸ್ವತಃ ದೇವೇಗೌಡರೇ ಹಲವು ಬಾರಿ ಹೆಮ್ಮೆಯಿಂದ ಹೇಳಿ ಕೊಂಡಿದ್ದಾರೆ. ಆರು ಮಕ್ಕಳೊಂದಿಗೆ ಇಡೀ ಕುಟುಂಬ ಮುನ್ನಡೆಸಿದ



ಮಹಾತಾಯಿ, ಅತಿಥಿಗಳ ಪಾಲಿನ ಅನ್ನಪೂರ್ಣೆಯಾಗಿದ್ದ ಅವರ ನಿಧನ ಕುಟುಂಬಕ್ಕೆ ಮಾತ್ರವಲ್ಲದೇ ಪಕ್ಷದ ಕಾರ್ಯಕರ್ತರಿಗೂ ಅತೀವ ನೋವು ತರಿಸಿದೆ.

**ಸ್ವಾತಂತ್ರ್ಯ ಪೂರ್ವದ ಸುಶಿಕ್ಷಿತೆ**

1937ರಲ್ಲಿ ಜನಿಸಿದ ಚೆನ್ನಮ್ಮ ಅವರು ಹಾಸನ ತಾಲ್ಲೂಕಿನ ಮುತ್ತಿಗೆ ಹಿರೇಹಳ್ಳಿಯ ಸಿರಿವಂತ ಪಟೇಲ್ ದೇವೇಗೌಡ ಮತ್ತು ಕಾಳಮ್ಮ ದಂಪತಿಯ ನಾಲ್ವರು ಪುತ್ರರು ಹಾಗು ನಾಲ್ವರು ಹೆಣ್ಣು ಮಕ್ಕಳಲ್ಲಿ ಹಿರಿಯ ವರು. ಅಂದಿನ ಸ್ವಾತಂತ್ರ್ಯ ಪೂರ್ವದ ಕಾಲದಲ್ಲೇ ತಮ್ಮೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಹೊಳೆನರಸೀಪುರ ತಾಲ್ಲೂಕಿನ ಹಳೆಕೋಟೆಯ ಶಾಲೆಗೆ ನಿತ್ಯ 5 ಕಿ.ಮೀ ನಡೆದುಕೊಂಡೇ ಹೋಗಿ ಲೋಯರ್ ಸೆಕೆಂಡರಿ ಶಿಕ್ಷಣ ಪೂರೈಸಿದ ಸುಶಿಕ್ಷಿತ ಹೆಣ್ಣುಮಗಳು. ಪ್ರೌಢಶಾಲೆ ಹತ್ತಿರದಲ್ಲಿ ಇಲ್ಲದ ಕಾರಣ ಓದು ಅಲ್ಲಿಗೆ ನಿಲ್ಲಿಸ ಬೇಕಾಯಿತು. ಬಳಿಕ ತಮ್ಮ 17ನೇ ವಯಸ್ಸಿನಲ್ಲಿ 1954ರ ಮೇ 25ರಂದು ಹೆಚ್.ಡಿ.ದೇವೇಗೌಡರನ್ನು ಚೆನ್ನಮ್ಮ ವರಿಸಿದರು. » **ನಾಲ್ಕನೇ ಪುಟದಲ್ಲಿ**

### ಕುಟುಂಬ ಮುನ್ನಡೆಸಿದ ಮಹಾತಾಯಿ

**ಶ್ರೀಮಂತ ಮನೆತನದಿಂದ ಬಂದರೂ ಅಹಂಕಾರವಿಲ್ಲದೆ ಅಪ್ಪಟ ಸಂಪ್ರದಾಯಸ್ಥ ಮಹಿಳೆ ಯಾಗಿ ಬದುಕಿದ ಚೆನ್ನಮ್ಮ ಅವರು, ದೇವೇಗೌಡರ ರಾಜಕೀಯ ಏಳಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದರು ಹೆಚ್.ಡಿ. ಬಾಲಕೃಷ್ಣೇಗೌಡ, ಹೆಚ್.ಡಿ.ರೇವಣ್ಣ, ಹೆಚ್.ಡಿ. ರಮೇಶ್‌ಗೌಡ, ಹೆಚ್. ಡಿ.ಕುಮಾರ ಸ್ವಾಮಿ ನಾಲ್ಕು ಪುತ್ರರು ಹಾಗು ಶೈಲಜಾ ಮತ್ತು ಅನುಸೂಯ ಇಬ್ಬರು ಪುತ್ರಿಯರು ಸೇರಿ ಒಟ್ಟು ಆರು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ ಬೆಳೆಸಿದರು.**



### ಆ್ಯಸಿಡ್ ದಾಳಿಗೆ ಎದೆಗುಂದದ ಗಟ್ಟಿಗಿತ್ತಿ

ದೇವೇಗೌಡರ ಕುಟುಂಬಕ್ಕೆ ಹರದನಹಳ್ಳಿಯ ದೇವೇಶ್ವರ ಸ್ವಾಮಿ ಮನೆ ದೇವರು. ಪ್ರತಿ ವರ್ಷ ಶಿವರಾತ್ರಿಯಂದು ಇಲ್ಲಿ ಪೂಜೆ ಸಲ್ಲಿಸುವುದು ವಾಡಿಕೆ. ಅದರಂತೆ 2001ರ ಫೆಬ್ರವರಿ 21ರಂದು ನಡೆದ ಘಟನೆ ಇಡೀ ಕುಟುಂಬವನ್ನು ನಡುಗಿಸಿತ್ತು. ಚೆನ್ನಮ್ಮ ಅವರು ಪುತ್ರ ರೇವಣ್ಣ ಹಾಗು ಸೊಸೆ ಭವಾನಿ ರೇವಣ್ಣ ಅವರೊಂದಿಗೆ ದೇವಸ್ಥಾನಕ್ಕೆ ಬಂದಿದ್ದರು. ಪೂಜೆಯಲ್ಲಿದ್ದಾಗ ದೇವೇಗೌಡರ ಸಹೋದರ ಬಸವೇಗೌಡರ ಪುತ್ರ ಲೋಕೇಶ್ ಪೂಜೆಯ ನೆಪದಲ್ಲಿ ಬಂದು ಚೆನ್ನಮ್ಮ ಅವರ ಮೇಲೆ ಆ್ಯಸಿಡ್ ದಾಳಿ ನಡೆಸಿದ್ದ. ಈ ಘಟನೆಯಲ್ಲಿ ಚೆನ್ನಮ್ಮ ಅವರ ಮುಖ, ತಲೆಗೆ ಗಂಭೀರ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾದರು.

ಆ್ಯಸಿಡ್ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದರೂ ಚೇತರಿಸಿಕೊಂಡು ತಮ್ಮ ಗಟ್ಟಿ ತನವನ್ನು ಪ್ರದರ್ಶಿಸಿದ್ದರು. ಪ್ರಕರಣದಲ್ಲಿ ಆರೋಪಿಗೆ ನ್ಯಾಯಾಲಯ ಎಂಟು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

# ಗೃಹ ತಪಸ್ವಿನಿ-ಚೆನ್ನಮ್ಮ

ತಮ್ಮ ಪತಿ ರಾಷ್ಟ್ರದ ಅತ್ಯುನ್ನತ ಹುದ್ದೆಯನ್ನಲಂಕರಿಸಿದ ಸುದ್ದಿ ತಮಗೆ ತಲುಪಿದ ಸಂದರ್ಭದಲ್ಲಿ ಚೆನ್ನಮ್ಮನವರ ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ತಿಳಿಯಲು ಎಲ್ಲರಿಗೂ ಕುತೂಹಲವಿರುತ್ತದೆ. ದಾಂಪತ್ಯ ಜೀವನದುದ್ದಕ್ಕೂ ಪತಿಯವರು ಬಿಡುವಿಲ್ಲದ ಸಾರ್ವಜನಿಕ ಜೀವನದಲ್ಲಿ ಮುಳುಗಿದಿದ್ದುದನ್ನು ಚೆನ್ನಮ್ಮನವರು ಕಂಡಿದ್ದರಷ್ಟೇ. ಈಗ ಪತಿ ಪ್ರಧಾನ ಮಂತ್ರಿಯಾದರು ಎಂಬ ವಿಷಯ ಗೊತ್ತಾದಾಗ ಇದೊಂದು ತಲೆನೋವು ಎಂದರು.

ಪತ್ನಿ ಚೆನ್ನಮ್ಮನವರಿಗೆ ದೂರದ ದೆಹಲಿಯಲ್ಲಿ ಸ್ನೇಹಿತರಿರಲು ಸಾಧ್ಯವಿಲ್ಲ. ಆದಾಗ್ಯೂ ಮುಂದಿನ ದಿನಗಳನ್ನು ಬೇಸರದಲ್ಲಿ ಕಳೆಯಬೇಕೆಂದು ಅವರು ಸ್ವಲ್ಪವೂ ಖಿನ್ನರಾಗಲಿಲ್ಲ. ಪತಿ ಇರುವ ಕಡೆ ತಾವು ಇರಬೇಕಾದದ್ದು ಕರ್ತವ್ಯವೆಂದು ಅವರನ್ನು ಹಿಂಬಾಲಿಸಿದರು. ಆ ಅರ್ಥದಲ್ಲಿ ಅವರು ಗೌಡರ ನಿಜವಾದ ಸಹಧರ್ಮಿಣೀ.

ಒಂದು ಕಡೆ ಅವರು ಹೆಸರಿಲ್ಲದ ತನ್ನ ಪಾಡಿಗೆ ತಾನಿರುವ ಮಹಿಳೆ. ಇನ್ನೊಂದು ಕಡೆ ಸುಪ್ರಸಿದ್ಧ ಸಾರ್ವಜನಿಕ ವ್ಯಕ್ತಿಯೊಬ್ಬನ ಸಹಧರ್ಮಿಣಿ. ಅನಾಮಿಕತೆ ಹಾಗೂ ಸುಪ್ರಸಿದ್ಧತೆ ಎರಡನ್ನೂ ಏಕ ಕಾಲದಲ್ಲಿ ಅನುಭವಿಸುತ್ತಾ ಹೊಸದಾಗಿ ಪ್ರಾಪ್ತವಾದ ಹೊಣೆಯನ್ನು ಆಕೆ ಲಗು ಬಗೆಯಿಂದಲೇ ಹೊತ್ತರು ಎನ್ನಬೇಕು. ಅವರು ಎಲ್ಲಿರುತ್ತಾರೋ ನಾನು ಅಲ್ಲಿರಬೇಕು ತಾನೆ? ಎಂದು ಗೌಡರ ಜೊತೆ ಬಂದರು. ದೇವೇಗೌಡರ ನಿಡುಗಾಲದ ಬಿಡುವಿಲ್ಲದ ಬದುಕಿನಲ್ಲಿ ಅಷ್ಟಿಷ್ಟು ಸಮಯ ಅವರಿಗೆ ಮುಡಿಪಾದದ್ದಿದೆ. ಆದರೆ ಗೌಡರು ಪ್ರಧಾನ ಮಂತ್ರಿಯ ಜವಾಬ್ದಾರಿಯನ್ನು ಸ್ವೀಕರಿಸಿದ ಕ್ಷಣದಿಂದ ಅವರು ಇನ್ನಷ್ಟು ತ್ಯಾಗಕ್ಕೆ ಅಣಿಯಾಗತೊಡಗಿದರು.

ಇದೆಲ್ಲದಕ್ಕಿಂತ ಮುಖ್ಯವಾಗಿ ಹೊಸ ಜವಾಬ್ದಾರಿ ಸ್ಥಾನದಲ್ಲಿ ಅವರ ಹೊಣೆಗಾರಿಕೆ ಮತ್ತೂ ಹೆಚ್ಚಾಗಿತ್ತು. ಬರುವವರಿಗೆ ಲೆಕ್ಕವಿರುತ್ತಿರಲಿಲ್ಲ ಹೋಗುವವರಿಗೆ ಲೆಕ್ಕವಿರುತ್ತಿರಲಿಲ್ಲ. ಅವರ ಪೈಕಿ ನಿಜವಾಗಿ ನಿಷ್ಠೆ ಉಳ್ಳವರೆಷ್ಟು ಮಂದಿ? ಸುಮ್ಮನೆ ಬಾಲಬಡಕರೆಷ್ಟು? ಅವರವರ ವರ್ತನೆಗಳನ್ನು ಸಂತೈಸಿ ಕಳುಹಿಸಬೇಕಾದ ಜವಾಬ್ದಾರಿಯನ್ನು ಆಕೆ ವಹಿಸಿಕೊಂಡರು. ಜನರ ಕಷ್ಟಗಳನ್ನು ಅಹವಾಲುಗಳನ್ನು ಆಲಿಸುವ ದೀರ್ಘ ಕರ್ಣ ಅವರಾಗಬೇಕಾಯಿತು.

ಪಕ್ಷದ ಕಾರ್ಯಕರ್ತರೊಬ್ಬರು ಈ ಎಲ್ಲದರ ಮಧ್ಯೆ ಅವರಿಗೆ ದೀರ್ಘದಂಡ ನಮಸ್ಕಾರ ಮಾಡಿದಂಥ ಸಂದರ್ಭದಲ್ಲಿ ನಾನೇನು ದೇವಿಯೇ ವರ ಕೊಡುವುದಕ್ಕೆ? ಎಂದು ಬಿಡುತ್ತಿದ್ದರು. ನಾವೀಗ ದೆಹಲಿಗೆ ಹೋಗುತ್ತಿದ್ದೇವೆ ಅಲ್ಲಿಯಂತೂ ಸಾಹೇಬರನ್ನು ಬಂದು ಭೇಟಿಯಾಗುವವರ ಒಂದು ದಂಡೇ ಇರುತ್ತದೆ ಎಂದು ಮುಖದ ಮೇಲೆ ನಗು ತಂದುಕೊಂಡು ಚೆನ್ನಮ್ಮ ಹೇಳುತ್ತಿದ್ದರು.

ದೇವೇಗೌಡರು ದೆಹಲಿಯಲ್ಲಿ ಪ್ರಧಾನ ಮಂತ್ರಿಯಾದಾಗ ಕರ್ನಾಟಕದಲ್ಲಿ ಅವರ ಉತ್ತರಾಧಿಕಾರಿಯನ್ನು ಪ್ರತಿಷ್ಠಾಪಿಸುವ ಗೌಜಿನಲ್ಲಿದ್ದಾಗ ಭೇಟಿಯಾಗಲು ಬಂದ ಮಾಧ್ಯಮ ದವರಿಗೆ ಚೆನ್ನಮ್ಮ ಹೇಳಿದ್ದು ಒಂದೇ ನುಡಿ: ನನಗೇನೂ ಭಯವಿಲ್ಲ.

**ರಾಜಕಾರಣದಲ್ಲಿದ್ದೂ ಇಲ್ಲದಂತೆ**

ಪತಿಯಾದ ದೇವೇಗೌಡರು ರಾಜಕಾರಣವನ್ನು



ಉಸಿರಾಗಿರುವವರು ಅವರಿಬ್ಬರು ಗಂಡು ಮಕ್ಕಳು ರಾಜಕಾರಣದಲ್ಲಿದ್ದಾರೆ. ಒಟ್ಟಿನಲ್ಲಿ ಮನೆಯ ವಾತಾವರಣದಲ್ಲೇ ರಾಜಕಾರಣ ವಿರಾಜ ಮಾನವಾಗಿದೆ. ಆದಾಗ್ಯೂ ಚೆನ್ನಮ್ಮ ಇದಕ್ಕೆಲ್ಲ ಅಂಟಿಯೂ ಸಾಗಿ ಬಂದಿದ್ದಾರೆ. ಇಷ್ಟಾಗಿಯೂ ಗೌಡರು ಪ್ರಧಾನ ಮಂತ್ರಿಯಾದ ಸಂದರ್ಭದಲ್ಲಿ ಸ್ವಗತವೆಂಬಂತೆ ಅವರು ನುಡಿಯುತ್ತಿದ್ದುದು: ಮೊದಲಾದರೆ ನಾನು ರಾಜಕಾರಣವನ್ನು ತಿಳಿದುಕೊಳ್ಳಬೇಕಾದ ಅಗತ್ಯವಿರಲಿಲ್ಲ. ಏನೇ ಜವಾಬ್ದಾರಿ ವಹಿಸಿ ಕೊಂಡರೂ ವಯಿನಾಗಿ, ನೇರ್ಪಾಗಿ ಸರಿಯಾಗಿ ನೆರವೇರಿಸುತ್ತಾರೆ ಎಂಬ ನಂಬಿಕೆ ನನಗಿತ್ತು. ಇಷ್ಟು ದೊಡ್ಡ ಹುದ್ದೆಯನ್ನು ದೇವೇಗೌಡರು ಅಲಂಕರಿಸಿದ್ದು ಆಕೆಗೆ ತುಂಬಾ ಸಂತೋಷವನ್ನು ತಂದಿರಬೇಕಲ್ಲವೇ? ಹಾಗಂತ ಕೇಳಿದವರಿಗೆ ಚೆನ್ನಮ್ಮ ಹೇಳುವುದು; ಅವರು ಗೆದ್ದಾಗ ನಾನು ತುಂಬಾ ಸಂತೋಷಕ್ಕೊಳಗಾಗಲಿಲ್ಲ ಅವರು ಸೋತಾಗ ದು:ಖಪಡಲಿಲ್ಲ. ಈಗ ಅವರು ಸೋತಿದ್ದರೆ ಕರ್ನಾಟಕ ಅವರ ಪಾಲಿಗೆ ಇದ್ದೇ ಇತ್ತು. ಇಲ್ಲಿಯವರು ಅವರನ್ನು ತಮ್ಮ ನಾಯಕರಾಗಿ ಆರಿಸಿ ಕೊಂಡರು. ನಮ್ಮವರಿಗೆ ರಾಜ್ಯದ ಜನತೆಯ ಸೇವೆಮಾಡಬೇಕೆಂಬ ಪ್ರೀತಿ ಕಡಿಮೆಯಾಗುದಿಲ್ಲ.ರಾಜಕಾರಣದ ಮಿಂಚು ಸಂಚಾರವಾಗುವವರೆಗೆ ದೇವೇಗೌಡರ ಕುಟುಂಬ ಬಾಕಿ ಅಸಂಖ್ಯಾತ ಕುಟುಂಬಗಳಂತೆಯೇ ತನ್ನ ಪಾಡಿಗೆ ತಾನಿತ್ತು.

ದೇವೇಗೌಡರು ಪ್ರಧಾನ ಮಂತ್ರಿಯಾದ ಎರಡೇ ದಿನಗಳಲ್ಲಿ ಅವರ ಮನೆಯಲ್ಲಿ ಸಡಗರ ಸಂಭ್ರಮ ಅವರ ಒಂಭತ್ತು ಮಂದಿ ಮೊಮ್ಮಕ್ಕಳು ಪ್ರಧಾನ ಮಂತ್ರಿಯ ಮೊಮ್ಮಕ್ಕಳು ಹರ್ಷೋಲ್ಲಾಸ ಆಚರಿಸುವಂತೆಯೇ ಆನಂದ ತುಂದಿಲರಾಗಿದ್ದಾರೆ. ಭಾರತದ ಪ್ರಧಾನ ಮಂತ್ರಿ ಯಾರು? ಎಂದು ಕೇಳಿದರೆ ಒಕ್ಕೊರಲಿನಲ್ಲಿ ಅವರು ಹೆಚ್ .ಡಿ.ದೇವೇಗೌಡರು! ಎಂದು ಛಾವಣಿ ಕಿತ್ತು ಹೋಗುವ ಹಾಗೆ ಅಬ್ಬರಿಸುತ್ತಾರೆ.

ಚೆನ್ನಮ್ಮನವರು ಬೆಳಗಿನ ಜಾವ 5 ಗಂಟೆಗೂ ಮೊದಲು ಏಳುವ ರೂಢಿಯವರು. ಗೌಡರು ಏಳುವುದಕ್ಕೂ ಮೊದಲು ಆಕೆ ಎದ್ದೇ ತೀರಬೇಕು. ಅದು ಅವರ ದಿನಚರಿಯ ಒಂದು ಭಾಗ ದೆಹಲಿಯಲ್ಲಿ ಪ್ರಧಾನ ಮಂತ್ರಿಯೊಂದಿಗಿನ ಜೀವನ ದೇಶ-ವಿದೇಶಗಳಿಂದ ಪ್ರಧಾನ ಮಂತ್ರಿ ಗಳನ್ನು ಭೇಟಿಯಾಗಲು ಬರುವವರು ಆ ಜೀವನ ಶೈಲಿ ಇವೆಲ್ಲ ಚೆನ್ನಮ್ಮನವರಿಗೆ ಕೊಂಚ ಗಾಬರಿ ಯನ್ನುಂಟು ಮಾಡಿದ್ದ ಪ್ರಸಂಗಗಳೇ. **(ಸಾಧನೆಯ ಶಿಖರಾರೋಹಣ ಪುಸ್ತಕದಿಂದ ಆಯ್ದ ಭಾಗ)**

## ಜಮೀನು ವ್ಯಾಜ್ಯ ವ್ಯಕ್ತಿ ಕೊಲೆಯಲ್ಲಿ ಅಂತ್ಯ

• ಪ್ರಜೋದಯ ವರದಿ

**ಹಾಸನ:** ಜಮೀನಿನ ವಿಚಾರವಾಗಿ ಶುರುವಾದ ಜಗಳ ವ್ಯಕ್ತಿಯೊಬ್ಬರ ಕೊಲೆಯಲ್ಲಿ ಅಂತ್ಯ ವಾಗಿರುವ ಘಟನೆ ತಾಲ್ಲೂಕಿನ ಪೆರುಮನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಕೆಂಪೇಗೌಡ (58) ಮೃತರು. ಸಹೋದರ ಸಂಬಂಧಿಕರಾದ ಕಾಂತರಾಜು, ಸುನೀಲ್‌ಕುಮಾರ್ ಹಾಗು ಸರೋಜಮ್ಮ ಅವರು ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಗೈದಿದ್ದಾರೆಂದು ಮೃತರ ಪುತ್ರ ಆನಂದ್ ಆರೋಪಿಸಿದ್ದಾರೆ.

ಜು.17ರ ಶುಕ್ರವಾರ ಕೆಂಪೇಗೌಡರ ಪತ್ನಿ ಜಯಕುಮಾರಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿಗೆ ಬಂದ ಕಾಂತ ರಾಜು ಹಾಗು ಸರೋಜಮ್ಮ ಹಾಗು ಸುನೀಲ್‌ಕುಮಾರ್ ವಾಗ್ವಾದ ಶುರು ಮಾಡಿದ್ದಾರೆ. ಜಮೀನು ವಿವಾದ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಅಲ್ಲಿಯೇ ಪರಿಹಾರ ಕಂಡುಕೊಳ್ಳೋಣವೆಂದು ಜಯಕುಮಾರಿ ಹೇಳಿದರೂ ಕೇಳದೆ ಮೂವರು ಏಕಾಏಕಿ ಗಲಾಟೆ ಶುರು ಮಾಡಿದ್ದರು ಎನ್ನಲಾಗಿದೆ.

ಈ ವೇಳೆ ಅಲ್ಲಿಗೆ ಬಂದ ಕೆಂಪೇಗೌಡ ಹಾಗು ಮೂವರ ನಡುವೆ ಜೋರು ಗಲಾಟೆ ನಡೆದಿದೆ. ಕೆಂಪೇಗೌಡ ಅವರ ಕೊರಳಪಟ್ಟಿ ಹಿಡಿದು ಉಸಿರುಗಟ್ಟಿಸಿ, ಹಲ್ಲೆ ನಡೆಸಿದ್ದರಿಂದ ಸ್ಥಳದಲ್ಲೇ ಮೃತ ಪಟ್ಟಿದ್ದಾರೆಂದು ತಿಳಿದುಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಶಾಂತಿಗ್ರಾಮ ಠಾಣೆ ಪೊಲೀಸರು ವಿಚಾರಣೆ ಮುಂದುವರಿಸಿದ್ದಾರೆ.

## ಆಸ್ತಿ ಮಾರಾಟ ಕಲಹ: ತಂದೆಯನ್ನು ಕೊಂದು ನೇಣಿಗೆ ಶರಣಾದ ಪುತ್ರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆಸ್ತಿ ಮಾರಾಟದ ವಿಚಾರವಾಗಿ ತಂದೆಯೊಂದಿಗೆ ಜಗಳ ಮಾಡಿ ಅವರನ್ನು ಕೊಲೆ ಮಾಡಿರುವ ಪುತ್ರ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ 13ನೇ ವಾರ್ಡ್‌ನ ಗೂರನಹಳ್ಳಿಯಲ್ಲಿ ಶನಿವಾರ ನಡೆದಿದೆ.

ನಿವೃತ್ತ ಮುಖ್ಯ ಶಿಕ್ಷಕ ಬಿ.ಎನ್. ಚನ್ನೇಗೌಡ (73) ಹಾಗು ಪುತ್ರ ಬಿಂದುಕುಮಾರ್ (42) ಮೃತರು.

ಶಿಕ್ಷಕ ವೃತ್ತಿಯಿಂದ ನಿವೃತ್ತರಾಗಿದ್ದ ಚನ್ನೇಗೌಡ ಎಲ್‌ಐಸಿ ಏಜೆಂಟರಾಗಿ ಕೆಲಸ ಮಾಡಿಕೊಂಡಿ ದ್ದರು. ಪತ್ನಿ ನಿಧನದ ಬಳಿಕ ಇಬ್ಬರೇ ಪಟ್ಟಣ ಮನೆಯಲ್ಲಿ ವಾಸವಿದ್ದರು. ಅವರಿಗೆ ಇಬ್ಬರು ಪುತ್ರರಿದ್ದು ಮೊದಲ ಮಗ ಗಿರೀಶ್ ಗುತ್ತಿಗೆದಾರನಾಗಿದ್ದು ನಾಗಸಮುದ್ರ ರಸ್ತೆಯ ಬಾಡಿಗೆ ಮನೆಯಲ್ಲಿ ವಾಸವಿದ್ದಾನೆ. ಎರಡನೇ ಪುತ್ರ ಬಿಂದುಕುಮಾರ್ ಬೆಂಗಳೂರಿನಲ್ಲಿ ಕಾರು





ಚಾಲಕ ರಾಗಿ ಕೆಲಸ ಮಾಡಿಕೊಂಡಿದ್ದ. ಕುಟುಂಬ ಸಮೇತ ಬೆಂಗಳೂರಿನಲ್ಲಿ ವಾಸವಿದ್ದ ಆತ ವಾರಾಂತ್ಯ ದಲ್ಲಿ ಊರಿಗೆ ಬರುತ್ತಿದ್ದ ಎನ್ನಲಾಗಿದೆ.

ಕಳೆದ ಹತ್ತು ವರ್ಷದಿಂದ ಗೂರನಹಳ್ಳಿ ವಾರ್ಡ್‌ನಲ್ಲಿರುವ ಮನೆ ಮಾರಾಟ ಮಾಡಿ ಹಣ ಕೊಡುವಂತೆ ಕಿರಿಯ ಪುತ್ರ ಬಿಂದುಕುಮಾರ್, ತಂದೆ ಮೇಲೆ ಒತ್ತಡ ಹಾಕುತ್ತಿದ್ದ. ಮನೆ ಮಾರಾಟದ ವಿಷಯವಾಗಿ ತಂದೆ ಹಾಗು ಪುತ್ರನ ನಡುವೆ ಆಗಾಗ ವ್ಯಾಜ್ಯ ನಡೆಯುತ್ತಿತ್ತು. ಶನಿವಾರ ಬೆಳಿಗ್ಗೆ ಬಿಂದುಕುಮಾರ್ ಗೂರನಹಳ್ಳಿಗೆ ಆಗಮಿಸಿದ್ದ ವೇಳೆ ಮನೆ ಮಾರಾಟದ ವಿಷಯವಾಗಿ ಶುರುವಾದ ಜಗಳ ತಾರಕಕ್ಕೇರಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆಗೈದಿದ್ದಾನೆ. ನಂತರ ತಾನೂ ನೇಣಿಗೆ ಶರಣಾಗಿದ್ದಾನೆಂದು ಸ್ಥಳೀಯರು ಮಾಹಿತಿ ನೀಡಿದರು.

ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಮಾತನಾಡಿ, ಎಂಟು ವರ್ಷಗಳ ಹಿಂದೆ ಚನ್ನೇಗೌಡ ಅವರ ಪತ್ನಿ ನಿಧನರಾಗಿದ್ದು ಮನೆಯಲ್ಲಿ ಒಬ್ಬರೇ ಇದ್ದರು. ಚನ್ನೇಗೌಡರ ಮೃತದೇಹ ಕೊಲೆ ಮಾಡಿದ ರೀತಿ ಹಾಗು ಬಿಂದುಕುಮಾರ್ ಅವರ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಲಾಗುವುದು ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ನಗರ ಠಾಣೆ ಪಿಐ ರಘುಪತಿ ಹಾಗು ಸಿಬ್ಬಂದಿ ಹಾಜರಿದ್ದರು.

## ಚೆನ್ನಮ್ಮ ವಿಧಿವಶ: ಹರದನಹಳ್ಳಿಯಲ್ಲಿ ನೀರವ ಮೌನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ನಿಧನಕ್ಕೆ ಸ್ವಗ್ರಾಮ ಹರದನಹಳ್ಳಿಯಲ್ಲಿ ನೀರವ ಮೌನ ಆವರಿಸಿದೆ.

ತಮ್ಮ ಪತಿ ಪ್ರಧಾನಿ ಹುದ್ದೆಗೇರಿ ದರೂ ಚೆನ್ನಮ್ಮ ಅವರು ಗ್ರಾಮಸ್ಥರೊಂದಿಗೆ ಅದೇ ಬಾಂಧವ್ಯ ಹೊಂದಿದ್ದರು. ಸಂಬಂಧಿಕರು, ಗ್ರಾಮಸ್ಥರನ್ನು ಅಪ್ಯಾಯಮಾನವಾಗಿ ಪ್ರೀತಿಸುತ್ತಿದ್ದ ಅವರು ಎಲ್ಲರ ಸಂತೋಷ ಬಯಸುತ್ತಿದ್ದರು. ಗ್ರಾಮದಲ್ಲಿ ಯಾರಾದರೂ ತೊಂದರೆಗೆ ಸಿಲುಕಿರುವುದು ಗೊತ್ತಾದರೆ ತಕ್ಷಣವೇ ಸ್ಪಂದಿಸುತ್ತಿದ್ದರು. ಊರಿನಲ್ಲಿ ಚೆನ್ನಮ್ಮ ಇದ್ದಾರೆಂದರೆ ಒಂದು ರೀತಿ ಸಂಭ್ರಮ ಕಳೆಗಟ್ಟುತ್ತಿತ್ತು. ಚೆನ್ನಮ್ಮ ಅವರ ಅಗಲಿಕೆಯ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಪ್ರತಿ ಯೊಬ್ಬರು ಶೋಕ ಸಾಗರ ದಲ್ಲಿ ಮುಳುಗಿದ್ದಾರೆ. ಎಲ್ಲರ ಕಣ್ಣಾಲಿಗಳು ತುಂಬಿ ಬಂದಿವೆ.

ದೇವೇಗೌಡರ ಅಂದಿನ ರಾಜಕೀಯ ದಿನಗಳಲ್ಲಿ ತಾಲ್ಲೂಕಿನಲ್ಲಿ ಎಲ್ಲರ ಜೊತೆ ಉತ್ತಮ ಒಡನಾಟ ಹೊಂದಿದ್ದರು. ಮುಖಂಡರು, ಕಾರ್ಯಕರ್ತರು ಆಹ್ವಾನಿಸಿದ ಶುಭ- ಸಮಾ



ರಂಭಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ಇಂದೂ ಕೂಡ ತಾಲ್ಲೂಕಿನ ಹಲವು ಕುಟುಂಬಗಳು ಚೆನ್ನಮ್ಮನವರು ಆಗಮಿಸಿದ ದಿನಗಳನ್ನು ಸ್ಮರಿಸುತ್ತಾರೆ. ಅವರ ಒಡನಾಟ, ಸರಳತೆ, ಪ್ರೀತಿ ಎಲ್ಲವನ್ನು ನೆನೆದು ಹೃದಯತುಂಬಿ ಗುಣಗಾನ ಮಾಡುತ್ತಾರೆ.

**ಅಪಾರ ದೈವಭಕ್ತೆ ಚೆನ್ನಮ್ಮ**

ದಿ॥ಚೆನ್ನಮ್ಮ ಅವರು ಹೆಚ್.ಡಿ. ದೇವೇಗೌಡರ ಜೊತೆ ತಪ್ಪದೇ ತಾಲ್ಲೂಕಿನ » **ನಾಲ್ಕನೇ ಪುಟದಲ್ಲಿ**

CMYK CMYK CMYK CMYK

# ಆರ್ಥಿಕ ಸ್ವಾವಲಂಬನೆಯಿಂದ ವ್ಯವಹಾರ ನಿರ್ವಹಣೆ ಸಾಧ್ಯ

## ಶಾಸಕ ಸಿ.ಎನ್.ಬಾಲಕೃಷ್ಣ | ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳ ವಿತರಣೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಿದಾಗ ಮಾತ್ರ ಕುಟುಂಬ ಹಾಗೂ ಸಮಾಜದಲ್ಲಿ ವ್ಯವಹಾರಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡಲು ಸಾಧ್ಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಜಿಲ್ಲಾ ಔದ್ಯೋಗಿಕ ಕೇಂದ್ರದ ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಸ್ವಾವಲಂಬನೆಗಾಗಿ 15 ಲಕ್ಷ ರೂ. ಮೌಲ್ಯದ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಮತ್ತು ಇತರ ಯಂತ್ರೋಪಕರಣಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, ರಾಜ್ಯ, ಕೇಂದ್ರ ಸರಕಾರ ಆರ್ಥಿಕ ಮತ್ತಯ ಶೈಕ್ಷಣಿಕ ಸ್ವಾವಲಂಬನೆಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿ ಗ್ರಾಮೀಣ ಭಾಗದ ಮಹಿಳೆಯರಿಗೆ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಆರ್ಥಿಕವಾಗಿ ಸ್ವಾವಲಂಬನೆ ಸಹಕಾರಿಯಾಗಿದೆ. ವಿವಿಧ ತರಬೇತಿಗಳನ್ನು ಪಡೆದು ಆ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು, ಮಾರುಕಟ್ಟೆಯ ಸಂಪೂರ್ಣ ಅರಿವು ಪಡೆದು ತಾವು ಪಡೆದ ತರಬೇತಿಯನ್ನು ಇನ್ನಷ್ಟು ವಿಸ್ತಾರಗೊಳಿಸಬೇಕು, ಮನುಷ್ಯನಿಗೆ ಆರ್ಥಿಕ ಪ್ರಗತಿಯೂ ಮುಖ್ಯ. ಆರ್ಥಿಕ ಸದೃಢತೆ ಹೊಂದಿದರೆ ಸ್ವಾವಲಂಬನೆಗೆ ದಾರಿಯಾಗುತ್ತದೆ ಎಂದು ಅವರು ತಿಳಿಸಿದರು.

155 ಅರ್ಹ ಫಲಾನುಭವಿಗಳನ್ನು ಗುರುತಿಸಿ ಹೊಲಿಗೆ ಯಂತ್ರ ಮತ್ತು ವೃತ್ತಿಪರ ಕುಶಲಕರ್ಮಿಗಳ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ. ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಂಡು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿ, ದುಡಿದ ಹಣದಲ್ಲಿ ಸ್ವಲ್ಪ ಭಾಗವನ್ನು ಉಳಿತಾಯ ಮಾಡಿ ಸಂಕಷ್ಟದ ಸಮಯದಲ್ಲಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಕೈಗಾರಿಕಾ ಉಪ ನಿರ್ದೇಶಕ ಸಿ.ಎಂ. ಮಹೇಶ್ ಕುಮಾರ್ ಮಾತನಾಡಿ, ವಿವಿಧ ವೃತ್ತಿಗಳಿಗೆ ಲಭ್ಯವಿರುವ ಉಪಕರಣಗಳನ್ನು ವೃತ್ತಿಪರ ಕುಶಲಕರ್ಮಿಗಳಿಗೆ ಅವರ ಕೆಲಸದ ಗುಣಮಟ್ಟ ಹೆಚ್ಚಿಸಲು ಮತ್ತು ದೈನಂದಿನ ಕೆಲಸವನ್ನು ಸುಲಭಗೊಳಿಸಲು ಆಧುನಿಕ ಕಿಟ್‌ಗಳನ್ನು ನೀಡಲಾಗುತ್ತದೆ ಆಧುನಿಕ ಉಪಕರಣಗಳು ಕೆಲಸವನ್ನು ತ್ವರಿತವಾಗಿ ಮತ್ತು ನಿಖರವಾಗಿ ಮಾಡಲು ಸಹಾಯ ಮಾಡುತ್ತವೆ. ಕೈಯಾರೆ ಮಾಡುವ ಕಠಿಣ ಕೆಲಸಗಳನ್ನು ಸುಲಭಗೊಳಿಸಿ, ದೈಹಿಕ ಆಯಾಸವನ್ನು ಕಡಿಮೆ ಮಾಡುತ್ತವೆ ಎಂದು ತಿಳಿಸಿದರು.

ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದಿಸುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಕುಶಲಕರ್ಮಿಗಳ ಆದಾಯ ಹೆಚ್ಚಾಗುತ್ತದೆ. ಆಧುನಿಕ ತಂತ್ರಜ್ಞಾನಕ್ಕೆ ತರಬೇತಿ ಹಾಗೂ ನವೀಕೃತ ಪರಿಕರಗಳ ಬಳಕೆಯು ಕುಶಲಕರ್ಮಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಸಜ್ಜುಗೊಳಿಸಿ ಕೌಶಲ್ಯ ಅಭಿವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕೈಗಾರಿಕಾ ವಿಸ್ತಾರಣಾಧಿಕಾರಿ ಆನಂದ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೆರಹಳ್ಳಿ ಮಂಜುನಾಥ್ ಇನ್ನಿತರರು ಭಾಗವಹಿಸಿದ್ದರು.

# ಗಿಡ ನೆಡುವ ಮೂಲಕ ಸಹಪಾಠಿಗಳ ಸ್ಮರಣೆ ಅರ್ಥಪೂರ್ಣ

• ಪ್ರಜೋದಯ ವರದಿ



**ಹಾಸನ:** ಗಿಡ ನೆಡುವುದು ಹಾಗೂ ಕ್ರೀಡಾ ಪರಿಕರಗಳನ್ನು ಕೊಡುಗೆಯಾಗಿ ನೀಡುವ ಮೂಲಕ ಅಗಲಿದ ಸಹಪಾಠಿಗಳನ್ನು ಸ್ಮರಿಸುವ ಕಾರ್ಯ ಅರ್ಥಪೂರ್ಣವಾದುದು ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಬಿ.ಆರ್.ಗುರುದೇವ್ ಅವರು ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ 2001ನೇ ಬ್ಯಾಚ್‌ನ ಹಳೆ ವಿದ್ಯಾರ್ಥಿಗಳು ಅಗಲಿದ ತಮ್ಮ ಸಹಪಾಠಿಗಳ ನೆನಪಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪದವಿ ಪೂರೈಸಿ 25 ವರ್ಷಗಳ ನಂತರವೂ ಓದಿದ ಕಾಲೇಜು ನೆನಪಿಸಿಕೊಂಡು ಕಾಲೇಜಿಗೆ ಏನಾದರೂ ಕೊಡುಗೆ ನೀಡಬೇಕೆಂಬ ಮನೋಭಾವ ಹೊಂದಿರುವುದು ಸಂತಸದ ವಿಚಾರ ಎಂದು ತಿಳಿಸಿದರು.

ಕಾಲೇಜಿನ ಹಳೆ ವಿದ್ಯಾರ್ಥಿ, ನಿವೃತ್ತ ವಿಂಗ್ ಕಮಾಂಡರ್ ಜಯಂತ್ ಅವರು ಮಾತನಾಡಿ, ಪದವಿ ಪೂರೈಸಿ 25 ವರ್ಷಗಳಾದದ್ದನ್ನು ಸಂಭ್ರಮಿಸುವ ಮುನ್ನ ನಮ್ಮೊಂದಿಗೆ ಅಂದು ಸಂತಸದ ದಿನಗಳನ್ನು ಕಳೆದು ಇಂದು ಭೌತಿಕವಾಗಿ ನಮ್ಮೊಂದಿಗೆ ಇಲ್ಲದ ಕ್ಲಾಸ್‌ಮೇಟ್‌ಗಳನ್ನು ಸ್ಮರಿಸುವ ಸಲುವಾಗಿ ಕಾಲೇಜು ಆವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡುತ್ತಿದ್ದೇವೆ. ಈ ಗಿಡಗಳು ಮರವಾಗಿ ಬೆಳೆದು ಫಲ ನೀಡಲಿ. ಆ ಮೂಲಕ ಅಗಲಿದ ಸಹಪಾಠಿಗಳು ನಮ್ಮೊಂದಿಗೆ ಇರುವ ಭಾವ ಮೂಡಲಿ ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು, ಮಲೆನಾಡು ಕಾಲೇಜಿನ ಹಳೆ ವಿದ್ಯಾರ್ಥಿಗಳ ಒಕ್ಕೂಟ ತುಂಬಾ ಕ್ರಿಯಾಶೀಲವಾಗಿದೆ. ಕಾಲೇಜಿನ ಬೆಳವಣಿಗೆಗೆ ಪೂರಕವಾಗುವ ಯೋಜನೆಗಳಲ್ಲಿ ಕಾಲೇಜಿನ ಹಳೆ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ಇದೇ ವೇಳೆ ಡಿಸೆಂಬರ್‌ನಲ್ಲಿ ನಡೆಯಲಿರುವ ಎಂಸಿಇ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮದ ಲೋಗೊ ಹಾಗೂ ವೆಬ್‌ಸೈಟ್ ಅನಾವರಣ ಮಾಡಲಾಯಿತು. ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯದರ್ಶಿ ಜಿ.ಟಿ.ಕುಮಾರ್, ಪ್ರಾಂಶುಪಾಲ ಡಾ.ಎಸ್.ಪ್ರದೀಪ್, ಹಳೆ ವಿದ್ಯಾರ್ಥಿಗಳಾದ ಆದರ್ಶ್ ಶೆಟ್ಟಿ, ತೇಜೇಶ್, ಸಂದೇಶ್, ಶೋಭಾ, ಭರತ್, ಚಂದ್ರಶೇಖರ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ಇನ್ನಿತರರು ಉಪಸ್ಥಿತರಿದ್ದರು.

## ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ

ಹಾಸನ: ಆತ್ಮ ಯೋಜನೆಯಡಿ 2026-27ನೇ ಸಾಲಿನ ಹಾಸನ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಹಾಸನ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕ ರಮೇಶ್ ಅವರು ತಿಳಿಸಿದ್ದಾರೆ.

ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ಆಧುನಿಕ ಯಂತ್ರೋಪಕರಣ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹಸಿರು ಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಇತ್ಯಾದಿ ಕೃಷಿ ಚಟುವಟಿಕೆಗಳಲ್ಲಿ ಸಾಧನೆ ಮಾಡಿದವರು ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ರೈತರು ಮತ್ತು ರೈತ ಮಹಿಳೆಯರು ಅರ್ಜಿಗಳನ್ನು ಸಹಾಯಕ ಕೃಷಿ ನಿರ್ದೇಶಕರು, ಹಾಸನ ತಾಲ್ಲೂಕು ಕಚೇರಿಯಿಂದ ಪಡೆದುಕೊಂಡು ಜು.31 ರೊಳಗೆ ಸಲ್ಲಿಸಬಹುದು.

# ಇಂದಿನಿಂದ ವೆಂಕಟರಮಣಸ್ವಾಮಿ ಜಾತ್ರೆ

• ಪ್ರಜೋದಯ ವರದಿ



**ಅರಸೀಕೆರೆ:** ರಾಜ್ಯದ ತಿರುಪತಿ ಎಂದೇ ಪ್ರಸಿದ್ಧಿಯಾಗಿರುವ ತಾಲ್ಲೂಕಿನ ಸುಕ್ಷೇತ್ರ ಮಾಲೆಕಲ್ಲು ಅಮರಗಿರಿ ತಿರುಪತಿಯಲ್ಲಿ ನೆಲೆಸಿರುವ ಲಕ್ಷ್ಮಿ ವೆಂಕಟರಮಣ ಸ್ವಾಮಿಯ ಜಾತ್ರಾ ಮಹೋತ್ಸವವು ದೇವಾಲಯದ ಸಂಪ್ರದಾಯದಂತೆ ನಡೆಯಲಿದ್ದು ಈಗಾಗಲೇ ಮುಜರಾಯಿ ಇಲಾಖೆ ಮತ್ತು ದೇವಾಲಯ ಅಭಿವೃದ್ಧಿ ಸಮಿತಿ ಸಕಲ ಸಿದ್ಧತೆಯಲ್ಲಿ ತೊಡಗಿದೆ ಎಂದು ಅಭಿವೃದ್ಧಿ ಸಮಿತಿಯ ಟಿ. ಆರ್.ನಾಗರಾಜ್ ಹೇಳಿದರು.

ಜಾತ್ರಾ ಮಹೋತ್ಸವ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜು.19 ರಿಂದ ಆಗಸ್ಟ್ 4 ರ ವರೆಗೆ ವೆಂಕಟರಮಣ ಸ್ವಾಮಿಯ ಜಾತ್ರಾ ಮಹೋತ್ಸವ ನಡೆಯಲಿದ್ದು ಪ್ರತಿದಿನ ವಿಶೇಷ ಪೂಜೆ ಅಲಂಕಾರ ಪ್ರಿಯರಾದ ವೆಂಕಟರಮಣ ಸ್ವಾಮಿಗೆ ನಾನಾ ಅಲಂಕಾರಗಳು ನಂತರ ದೇವಾಲಯದ ಆವರಣದಲ್ಲಿ ಉತ್ಸವಗಳು ಸಂಪ್ರದಾಯದಂತೆ ಜರುಗಲಿದೆ ಎಂದು ತಿಳಿಸಿದರು.

ಶ್ರೀದೇವಿ ಭೂದೇವಿ ಸಮೇತನಾದ ವೆಂಕಟರಮಣ ಸ್ವಾಮಿಯ ಮಹಾ ರಥೋತ್ಸವವು ಜು.26 ರಂದು ಮಧ್ಯಾಹ್ನ ಜರುಗಲಿದ್ದು ನಾಡಿನಾದ್ಯಂತ ಇರುವ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ರಥೋತ್ಸವದಲ್ಲಿ ಪಾಲ್ಗೊಳ್ಳುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಪೊಲೀಸ್ ಇಲಾಖೆ ರಕ್ಷಣೆ ನೀಡುವಂತೆ ಹಾಗೂ ನಗರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಮಾಲೆಕಲ್ಲು ತಿರುಪತಿ ಗ್ರಾಮಕ್ಕೆ ಭಕ್ತರು ಬಂದು ಹೋಗಲು ಸಾರಿಗೆ ಇಲಾಖೆ ವತಿಯಿಂದ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಈಗಾಗಲೇ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ದೇವಾಲಯದ ಆಗಮಿಕರಾದ ಎನ್.ರಾಮ್ ಪ್ರಸಾದ್ ಮಾತನಾಡಿ, 17 ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವವು ಪ್ರತಿದಿನ ವಿಶೇಷತೆಯಿಂದ ಕೂಡಿರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದೇವಾಲಯದ ಅಭಿವೃದ್ಧಿ ಸಮಿತಿಯ ನಿಖಿಲ್ ಯೋಗನಾಥನ್, ದೇವಾಲಯದ ಪಾರು ಪತ್ತೆದಾರ್ ಲೋಕೇಶಯ್ಯ ಇತರರು ಉಪಸ್ಥಿತರಿದ್ದರು.

# ನವೋದಯ ವಿದ್ಯಾಸಂಘಕ್ಕೆ ಅವಿರೋಧ ಆಯ್ಕೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ನವೋದಯ ವಿದ್ಯಾಸಂಘಕ್ಕೆ ನೂತನ ಕಾರ್ಯದರ್ಶಿಯಾಗಿ ಆಡ್ವೋಕೇಟ್ ಜಲೇಂದ್ರಕುಮಾರ್ ಕಾರ್ಯದರ್ಶಿಯಾಗಿ ಮತ್ತು ಖಜಾಂಚಿಯಾಗಿ ಮರುವನಹಳ್ಳಿ ಸಂತೋಷ್ ಅವಿರೋಧವಾಗಿ ಆಯ್ಕೆಯಾದರು.

13 ನಿರ್ದೇಶಕ ಸ್ಥಾನದ ನವೋದಯ ವಿದ್ಯಾಸಂಘಕ್ಕೆ ಒಪ್ಪಂದದಂತೆ ಈ ಹಿಂದೆ ಕಾರ್ಯದರ್ಶಿಯಾಗಿದ್ದ ಶರತ್‌ಕೆಂಬಾಳು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದ ಹಿನ್ನಲೆಯಲ್ಲಿ ವಕೀಲ ಜಲೇಂದ್ರಕುಮಾರ್‌ರವರನ್ನು ಎಲ್ಲ ನಿರ್ದೇಶಕರು ಒಮ್ಮತದಿಂದ ಕಾರ್ಯದರ್ಶಿಯಾಗಿ ಮತ್ತು ಸಹ ಕಾರ್ಯದರ್ಶಿಯಾಗಿದ್ದ ಮರುವನಹಳ್ಳಿ ಸಂತೋಷ್ ಅವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಗಿತ್ತು.

ನೂತನ ಕಾರ್ಯದರ್ಶಿ ಮತ್ತು ಖಜಾಂಚಿಯವರು ನವೋದಯ ವಿದ್ಯಾಸಂಘದ ಆಡಳಿತ ಕಛೇರಿಯಲ್ಲಿ ನಿರ್ಗಮಿತ ಕಾರ್ಯದರ್ಶಿ ಶರತ್ ರವರಿಂದ ಕಪಾಟು ಕೀ ಪಡೆಯುವ ಮೂಲಕ ಸರಳವಾಗಿ ಅಧಿಕಾರ ಸ್ವೀಕಾರ ಮಾಡಿದರು. ಇನ್ನೊಂದೆಡೆ ಜಲೇಂದ್ರಕುಮಾರ್ ಅವರಿಂದ ನೂತನ ಖಜಾಂಚಿ ಮರುವನಹಳ್ಳಿ ಸಂತೋಷ್ ಅಧಿಕಾರ ಸ್ವೀಕಾರ ಮಾಡಿದರು.

ಸಮಾರಂಭಕ್ಕೆ ಸಾಕ್ಷಿಯಾಗಿದ್ದ ವಿದ್ಯಾಸಂಘದ ಅಧ್ಯಕ್ಷ ಸಿ.ಜೆ. ಮಂಜುನಾಥ್ ಮಾತನಾಡಿ, ನನ್ನ ಸಹಪಾಠಿಯಾದ ಶರತ್ ಕೆಂಬಾಳು ಅವರು ಕಾರ್ಯದರ್ಶಿಯಾಗಿ ಉತ್ತಮ ಕೆಲಸ ಮಾಡಿದ್ದು, ಅಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕಿಂದು ರಾಜಿನಾಮೆ ನೀಡಿ ಜಲೇಂದ್ರಕುಮಾರ್ ಅವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಲ್ಲರ ಸಹಕಾರದಿಂದು ಸಂಘದ ಅಭಿವೃದ್ಧಿಗೆ ಜಲೇಂದ್ರಕುಮಾರ್ ಮತ್ತು ಸಂತೋಷ್ ಶ್ರಮಿಸಲಿ ಎಂದು ಆಶಿಸಿದರು.

ಶರತ್ ಕೆಂಬಾಳು ಮಾತನಾಡಿ, 13ಮಂದಿ ನಿರ್ದೇಶಕರ ಸಹಕಾರ ಮತ್ತು ಸಂಸ್ಥೆಯ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳ ಸಹಕಾರದಿಂದ 23ತಿಂಗಳು ಉತ್ತಮ ಕೆಲಸ ಮಾಡಿದ ತೃಪ್ತಿ ಇದೆ. ಎಲ್ಲರ ಶ್ರಮದಿಂದ ಕಳೆದ ಸಾಲಿನಲ್ಲಿ ಉತ್ತಮ ಫಲಿತಾಂಶ ದಾಖಲಿಸಿದೆ. ಆದೇ ರೀತಿ ಉತ್ತಮ ದಾಖಲಾತಿಯೂ ಆಗಿದೆ ಎಂದು ಹೇಳಿದರು.

ಅಧಿಕಾರ ಸ್ವೀಕರಿಸಿ ಸಂಘದ ನಿರ್ದೇಶಕರು, ಶಿಕ್ಷಕರು, ಉಪನ್ಯಾಸಕರು, ಸಿಬ್ಬಂದಿವರ್ಗ, ಸ್ನೇಹಿತರು, ವಕೀಲ ಮಿತ್ರರು, ಹಿತೈಷಿಗಳಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಈ ವೇಳೆ ನಿರ್ದೇಶಕರುಗಳಾದ ಡಾ.ಪ್ರಮೋದ್, ಆನಂದ್ ಕಾಳೇನಹಳ್ಳಿ, ರಾಘು, ತಾ.ಒಕ್ಕಲಿಗರ ಸಂಘದ ಅಧ್ಯಕ್ಷ ಜಯಪಾಲ್, ಗೌ.ಅಧ್ಯಕ್ಷ ಶಿವೇಗೌಡ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ನಿಂಗರಾಜು, ಸೇರಿ ನವೋದಯ ವಿವಿಧ ಅಂಗಸಂಸ್ಥೆಯ ಪ್ರಾಂಶುಪಾಲರು, ಮುಖ್ಯಶಿಕ್ಷಕರು, ಉಪನ್ಯಾಸಕರು, ಶಿಕ್ಷಕರು, ಸಿಬ್ಬಂದಿ ವರ್ಗ ಹಾಜರಿದ್ದರು.

## ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಗೆ ಅರ್ಜಿ

**ಹಾಸನ:** ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ 2026-27 ನೇ ಸಾಲಿನಲ್ಲಿ ಕೃಷಿಯಲ್ಲಿ ರೈತರು ಸೀಮಿತ ಅವಧಿಯಲ್ಲಿಯೇ ಬೆಳೆಯನ್ನು ಕಟಾವು ಮಾಡಲು ಅಗತ್ಯವಿರುವ ಕಂಬೈನ್ಡ್ ಹಾರ್ವೆಸ್ಟರ್ ಹಬ್ ಮತ್ತು ಶುಗರ್ ಕೇನ್ (ಕಬ್ಬು) ಹಾರ್ವೆಸ್ಟರ್ ಹಬ್ ಸ್ಥಾಪನೆಗಾಗಿ ವೈಯಕ್ತಿಕ ಫಲಾನುಭವಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಸಾಮಾನ್ಯ ವರ್ಗ (ವೈಯಕ್ತಿಕ) ಘಟಕದಡಿ ಫಲಾನುಭವಿಗಳಿಗೆ ಶೇ.40 ರಷ್ಟು ಸಹಾಯಧನ ಇರುತ್ತದೆ, ಸಂಘ-ಸಂಸ್ಥೆ ಪರಿಶಿಷ್ಟ ಜಾತಿ (ವೈಯಕ್ತಿಕ) ಮತ್ತು ಪರಿಶಿಷ್ಟ ಪಂಗಡದ (ವೈಯಕ್ತಿಕ) ರೈತರಿಗೆ ಶೇ.50 ರಷ್ಟು ಸಹಾಯಧನ ಇರುತ್ತದೆ, ಅರ್ಜಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ

# ಶಿಕ್ಷಕರ ಆರೋಗ್ಯವೇ ಸಮಾಜದ ಭದ್ರ ಬುನಾದಿ

• ಪ್ರಜೋದಯ ವರದಿ



**ಬೇಲೂರು:** ಶಿಕ್ಷಕರು ರಾಷ್ಟ್ರ ನಿರ್ಮಾಣದ ಶಿಲ್ಪಿಗಳು. ಅವರು ಪ್ರತಿದಿನ ನೂರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿಯನ್ನು ಹೊತ್ತು ಒತ್ತಡದ ನಡುವೆ ಕಾರ್ಯ ನಿರ್ವಹಿಸುತ್ತಾರೆ. ಆದ್ದರಿಂದ ಶಿಕ್ಷಕರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಅತ್ಯಗತ್ಯ ಎಂದು ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ. ಶಿವರಾಜು ಹೇಳಿದರು.

ಅಂತರಾಷ್ಟ್ರೀಯ ರೋಟರಿ ಕ್ಲಬ್, ಬೇಲೂರು ವತಿಯಿಂದ ಪಟ್ಟಣದ ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯಲ್ಲಿ ಶಿಕ್ಷಕ ವೃಂದ ಹಾಗೂ ಸಿಬ್ಬಂದಿಗಳಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಸಂಕ್ರಾಮಿಕ ರೋಗಗಳ (ಎನ್‌ಸಿಡಿ) ವಿಭಾಗದ ಸಹಯೋಗದಲ್ಲಿ ಉಚಿತ ರಕ್ತದೊತ್ತಡ ಮತ್ತು ಮಧುಮೇಹ ತಪಾಸಣೆ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕರು ತಮ್ಮ ವೃತ್ತಿಯ ಒತ್ತಡ ಮತ್ತು ಜವಾಬ್ದಾರಿಗಳ ನಡುವೆ ಅನೇಕ ಬಾರಿ ಸ್ವಂತ ಆರೋಗ್ಯವನ್ನು ಕಡೆಗಣಿಸುವ ಪರಿಸ್ಥಿತಿ ಉಂಟಾಗುತ್ತದೆ. ನಿಯಮಿತ ಆರೋಗ್ಯ ತಪಾಸಣೆ, ಸಮತೋಲಿತ ಆಹಾರ, ಪ್ರತಿದಿನ ವ್ಯಾಯಾಮ, ಮಾನಸಿಕ ನೆಮ್ಮದಿ ಹಾಗೂ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರಿಂದ ಅನೇಕ ಅಸಂಕ್ರಾಮಿಕ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ತಡೆಗಟ್ಟಬಹುದು. ಆರೋಗ್ಯವಂತ ಶಿಕ್ಷಕರಿಂದಲೇ ಆರೋಗ್ಯವಂತ ವಿದ್ಯಾರ್ಥಿಗಳು ಹಾಗೂ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಇದೇ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯ ಪ್ರಾಂಶುಪಾಲ ಪ್ರಶಾಂತ್‌ಕುಮಾರ್ ಎನ್. ಅವರು ಮಾತನಾಡಿ, ಶಿಕ್ಷಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಶಾಲೆಯಲ್ಲಿಯೇ ಉಚಿತ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿರುವ ರೋಟರಿ ಕ್ಲಬ್‌ನ ಸಾಮಾಜಿಕ ಕಳಕಳಿ ಶ್ಲಾಘನೀಯವಾಗಿದೆ. ಇಂತಹ ಕಾರ್ಯಕ್ರಮಗಳು ಶಿಕ್ಷಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರ ಜೊತೆಗೆ ಸಮಯೋಚಿತ ಚಿಕಿತ್ಸೆ ಪಡೆಯಲು ಸಹಕಾರಿಯಾಗುತ್ತವೆ ಎಂದು ಅವರು ತಿಳಿಸಿದರು.

ಅಸಂಕ್ರಾಮಿಕ ರೋಗಗಳ (ಎನ್‌ಸಿಡಿ) ವಿಭಾಗದ ಕೌನ್ಸಿಲರ್ ಅವರು ಆಲೇಶ್ ಮಾತನಾಡಿ, ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳಂತಹ ಅಸಂಕ್ರಾಮಿಕ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚುವ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ವ್ಯಾಪ್ತಿಯಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ. ಸಾರ್ವಜನಿಕರು ಸರ್ಕಾರದ ಈ ಉಚಿತ ಸೇವೆಗಳ ಸದುಪಯೋಗ ಪಡೆದು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್ ವತಿಯಿಂದ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ್‌ಕುಮಾರ್, ಶ್ರೀವಿದ್ಯಾ, ಎನ್‌ಸಿಡಿ ವಿಭಾಗದ ಕೌನ್ಸಿಲರ್ ಹಾಲೇಶ್, ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಧನಂಜಯ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಕಾರ್ಯದರ್ಶಿ ರಾಘವೇಂದ್ರ, ಸದಸ್ಯರಾದ ವೈ.ಡಿ. ಲೋಕೇಶ್, ಪುಟ್ಟು, ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯ ಪ್ರಾಥಮಿಕ ಶಾಲೆಯ ಪ್ರಾಂಶುಪಾಲೆ ಶ್ರೀನಿಧಿ, ಶಿಕ್ಷಕ ವೃಂದ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಧನಂಜಯ್ ಹಾಗೂ ಎನ್‌ಸಿಡಿ ವಿಭಾಗದ ಸಿಬ್ಬಂದಿಗಳಾದ ಪೂರ್ಣೇಶ್, ಜಯಶ್ರೀ, ಕೇಶವ ಧರಣಿ ಇತರರು ಉಪಸ್ಥಿತರಿದ್ದರು.

### ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ ಎಮ್ ಎಫ್ ಸಿ ರವರ ನ್ಯಾಯಾಲಯ, ಅರಕಲಗೂಡು ಸಿಆರ್.ಮಿಸ್. 518/2026

ಅರ್ಜಿದಾರರು

: 1) ಜಯಂತಿ ಕೋಂ ಲೇಟ್ ಚನ್ನಕೇಶವ@ ಚನ್ನಕೇಶವಯ್ಯ ಸುಮಾರು 48 ವರ್ಷ,
2) ಅನುರಾಧ ಹೆಚ್,ಸಿ, ಕೋಂ ಭರತ್ ಕುಮಾರ್,ಹೆಚ್,ಎನ್, ಸುಮಾರು 30 ವರ್ಷ,
3) ಮನುಕುಮಾರ ಹೆಚ್,ಸಿ,ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 28 ವರ್ಷ,
4) ಅಭಿಲಾಶ್ ಹೆಚ್,ಸಿ, ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 25 ವರ್ಷ,
1 ರಿಂದ 4ನೇ ಅರ್ಜಿದಾರರ ವಿಳಾಸ:-ಹೀರೇಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
5) ವಿಜಯ ಬಿನ್ ಲೇಟ್ ದ್ಯಾವಯ್ಯ, ಕೋಂ ಕೆ,ಹೆಚ್, ಕಳಸಯ್ಯ ಸುಮಾರು 70 ವರ್ಷ, ಮಲ್ಲಿಪಟ್ಟಣ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
6) ಸುಂದ್ರಮ್ಮ ಬಿನ್ ಲೇಟ್ ದ್ಯಾವಯ್ಯ ಕೋಂ ಲಕ್ಷ್ಮಣ 48ವರ್ಷ, ಬಿದರೂರ್ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ:

ವಿರುದ್ಧ

ರೆಸ್ಪಾಂಡೆಂಟರು: ತಹಸೀಲ್ದಾರರು ಹಾಗೂ ಜನನ-ಮರಣ ನೋಂದಣಾಧಿಕಾರಿಗಳು, ಅರಕಲಗೂಡು ತಾಲ್ಲೂಕು, ಅರಕಲಗೂಡು..

:: ಪತ್ರಿಕಾ ಪ್ರಕಟಣೆ :

ಈ ಮೂಲಕ ತಿಳಿಯಪಡಿಸುವುದೇನೆಂದರೆ, 1,5 & 6ನೇ ಅರ್ಜಿದಾರರ ತಾತನಾದ ಹಾಗೂ 2, 3 ಮತ್ತು 4ನೇ ಅರ್ಜಿದಾರರ ಮುತ್ತಾತನಾದ ಕಳಸಯ್ಯ ಬಿನ್ ಲೇಟ್ ಹುಚ್ಚಯ್ಯ ರವರು ದಿನಾಂಕ 07/ 04/ 1984 ರಂದು ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಹೀರೇಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಆ ಬಗ್ಗೆ ರೆಸ್ಪಾಂಡೆಂಟರಲ್ಲಿ ಮರಣ ಧೃಢೀಕರಣ ಪತ್ರ ಕೊಡುವಂತೆ ಅರ್ಜಿ ಸಲ್ಲಿಸಿದ್ದು ರೆಸ್ಪಾಂಡೆಂಟರು ಮೃತರ ಮರಣದ ಬಗ್ಗೆ ಮರಣ ನೋಂಧಣಿವಹಿಯಲ್ಲಿ ನೊಂದಣೆಯಾಗಿರುವುದಿಲ್ಲವೆಂದು ಅಲಭ್ಯ ಪ್ರಮಾಣಪತ್ರವನ್ನು ನೀಡಿದ್ದು, ಆ ಸಂಬಂಧ 1ನೇ ಅರ್ಜಿದಾರರ ಗಂಡನಾದ ಮೃತ ಚನ್ನಕೇಶವ@ ಚನ್ನಕೇಶವಯ್ಯ ರವರ ಹಾಗೂ,,5 & 6ನೇ ಅರ್ಜಿದಾರರ ತಾತನಾದ ಹಾಗೂ 2, 3 ಮತ್ತು 4ನೇ ಅರ್ಜಿದಾರರ ಮುತ್ತಾತನಾದ ಕಳಸಯ್ಯ ಬಿನ್ ಲೇಟ್ ಹುಚ್ಚಯ್ಯ ಇವರ ಮರಣದ ಬಗ್ಗೆ ಜನನ-ಮರಣ ನೋಂಧಣೆ ವಹಿಯಲ್ಲಿ ದಾಖಲಿಸಿಕೊಂಡು ಮೃತರ ಮರಣ ಧೃಢೀಕರಣ ಪತ್ರವನ್ನು ನೀಡುವಂತೆ ರೆಸ್ಪಾಂಡೆಂಟರಿಗೆ ಆದೇಶಿಸಲು ರೆಸ್ಪಾಂಡೆಂಟರ ವಿರುದ್ಧ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಈ ಬಗ್ಗೆ ಯಾರಿಗಾದರೂ ಹಕ್ಕು, ಹಿತಾಸಕ್ತಿ ಮತ್ತು ತಕರಾರು ಏನಾದರೂ ಇದ್ದಲ್ಲಿ ನೀವೇ ಖುದ್ದು ಹಾಜರಾತಿಯಿಂದಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ 07-08-2026 ರಂದು ಬೆಳಗ್ಗೆ 11-00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಪರ ಅಹವಾಲು ಸಲ್ಲಿಸಬವುದು. ತಪ್ಪಿದಲ್ಲಿ ನಿಮ್ಮ ಪರ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯ ತೀರ್ಮಾನ ಮಾಡಲಾಗುವುದು.

ಈ ತಿಳುವಳಿಕೆಯನ್ನು ದಿನಾಂಕ:-23-06-2026 ಘನ ನ್ಯಾಯಾಲಯದ ಆದೇಶದನ್ವಯ ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು (ನಳರಾಜ.ಎಂ)

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಸಿವಿಲ್ ನಾಯಾಧೀಶರು
ಜೆ ಎಮ್ ಎಫ್ ಸಿ ಅರಕಲಗೂಡು

### ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ ಎಮ್ ಎಫ್ ಸಿ ರವರ ನ್ಯಾಯಾಲಯ, ಅರಕಲಗೂಡು ಸಿಆರ್.ಮಿಸ್. 520/2026

ಅರ್ಜಿದಾರರು

: 1) ಜಯಂತಿ ಕೋಂ ಲೇಟ್ ಚನ್ನಕೇಶವ@ ಚನ್ನಕೇಶವಯ್ಯ ಸುಮಾರು 48 ವರ್ಷ,
2) ಅನುರಾಧ ಹೆಚ್,ಸಿ, ಕೋಂ ಭರತ್ ಕುಮಾರ್,ಹೆಚ್,ಎನ್, ಸುಮಾರು 30 ವರ್ಷ,
3) ಮನುಕುಮಾರ ಹೆಚ್,ಸಿ,ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 28 ವರ್ಷ,
4) ಅಭಿಲಾಶ್ ಹೆಚ್,ಸಿ, ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 25 ವರ್ಷ,
1 ರಿಂದ 4ನೇ ಅರ್ಜಿದಾರರ ವಿಳಾಸ:-ಹೀರೇಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
5) ವಿಜಯ ಬಿನ್ ಲೇಟ್ ದ್ಯಾವಯ್ಯ, ಕೋಂ ಕೆ,ಹೆಚ್, ಕಳಸಯ್ಯ ಸುಮಾರು 70 ವರ್ಷ, ಮಲ್ಲಿಪಟ್ಟಣ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
6) ಸುಂದ್ರಮ್ಮ ಬಿನ್ ಲೇಟ್ ದ್ಯಾವಯ್ಯ ಕೋಂ ಲಕ್ಷ್ಮಣ 48ವರ್ಷ, ಬಿದರೂರ್ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ:

ವಿರುದ್ಧ

ರೆಸ್ಪಾಂಡೆಂಟರು: ತಹಸೀಲ್ದಾರರು ಹಾಗೂ ಜನನ-ಮರಣ ನೋಂದಣಾಧಿಕಾರಿಗಳು, ಅರಕಲಗೂಡು ತಾಲ್ಲೂಕು, ಅರಕಲಗೂಡು..

:: ಪತ್ರಿಕಾ ಪ್ರಕಟಣೆ :

ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಾವನಾದ ಹಾಗೂ 2,3 ಮತ್ತು 4ನೇ ಅರ್ಜಿದಾರರ ತಾತನನಾದ ಮತ್ತು 5 ಮತ್ತು 6ನೇ ಅರ್ಜಿದಾರರ ತಂದೆಯಾದ ರವರು ದಿನಾಂಕ 06/08/1989 ರಂದು ದ್ಯಾವಯ್ಯ ಬಿನ್ ಲೇಟ್ ಜವರಯ್ಯ ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಹೀರೇಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಆ ಬಗ್ಗೆ ರೆಸ್ಪಾಂಡೆಂಟರಲ್ಲಿ ಮರಣ ಧೃಢೀಕರಣ ಪತ್ರ ಕೊಡುವಂತೆ ಅರ್ಜಿ ಸಲ್ಲಿಸಿದ್ದು ರೆಸ್ಪಾಂಡೆಂಟರು ಮೃತರ ಮರಣದ ಬಗ್ಗೆ ಮರಣ ನೋಂಧಣಿವಹಿಯಲ್ಲಿ ನೊಂಧಣಿಯಾಗಿರುವುದಿಲ್ಲವೆಂದು ಅಲಭ್ಯ ಪ್ರಮಾಣಪತ್ರವನ್ನು ನೀಡಿದ್ದು, ಆ ಸಂಬಂಧ 1ನೇ ಅರ್ಜಿದಾರರ ಮಾವನಾದ ಹಾಗೂ 2,3 ಮತ್ತು 4ನೇ ಅರ್ಜಿದಾರರ ತಾತನನಾದ ಮತ್ತು 5 ಮತ್ತು 6ನೇ ಅರ್ಜಿದಾರರ ತಂದೆಯಾದ ದ್ಯಾವಯ್ಯ ಬಿನ್ ಲೇಟ್ ಜವರಯ್ಯ ಇವರ ಮರಣದ ಬಗ್ಗೆ ಜನನ-ಮರಣ ನೋಂಧಣಿ ವಹಿಯಲ್ಲಿ ದಾಖಲಿಸಿಕೊಂಡು ಮೃತರ ಮರಣ ದೃಢೀಕರಣ ಪತ್ರವನ್ನು ನೀಡುವಂತೆ ರೆಸ್ಪಾಂಡೆಂಟರಿಗೆ ಆದೇಶಿಸಲು ರೆಸ್ಪಾಂಡೆಂಟರ ವಿರುದ್ಧ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಈ ಬಗ್ಗೆ ಯಾರಿಗಾದರೂ ಹಕ್ಕು, ಹಿತಾಸಕ್ತಿ ಮತ್ತು ತಕರಾರು ಏನಾದರೂ ಇದ್ದಲ್ಲಿ ನೀವೇ ಖುದ್ದು ಹಾಜರಾತಿಯಿಂದಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ/07/08/2026 ರಂದು ಬೆಳಗ್ಗೆ 11-00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಪರ ಅಹವಾಲು ಸಲ್ಲಿಸಬವುದು. ತಪ್ಪಿದಲ್ಲಿ ನಿಮ್ಮ ಪರ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯ ತೀರ್ಮಾನ ಮಾಡಲಾಗುವುದು.

ಈ ತಿಳುವಳಿಕೆಯನ್ನು ದಿನಾಂಕ:-23/06/2026 ಘನ ನ್ಯಾಯಾಲಯದ ಆದೇಶದನ್ವಯ ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು (ನಳರಾಜ.ಎಂ)

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಸಿವಿಲ್ ನಾಯಾಧೀಶರು
ಜೆ ಎಮ್ ಎಫ್ ಸಿ ಅರಕಲಗೂಡು

### ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ ಎಮ್ ಎಫ್ ಸಿ ರವರ ನ್ಯಾಯಾಲಯ, ಅರಕಲಗೂಡು ಸಿಆರ್.ಮಿಸ್. 519/2026

ಅರ್ಜಿದಾರರು

: 1) ಜಯಂತಿ ಕೋಂ ಲೇಟ್ ಚನ್ನಕೇಶವ@ ಚನ್ನಕೇಶವಯ್ಯ ಸುಮಾರು 48 ವರ್ಷ,
2) ಅನುರಾಧ ಹೆಚ್,ಸಿ, ಕೋಂ ಭರತ್ ಕುಮಾರ್,ಹೆಚ್,ಎನ್, ಸುಮಾರು 30 ವರ್ಷ,
3) ಮನುಕುಮಾರ ಹೆಚ್,ಸಿ,ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 28 ವರ್ಷ,
4) ಅಭಿಲಾಶ್ ಹೆಚ್,ಸಿ, ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 25 ವರ್ಷ,
1 ರಿಂದ 4ನೇ ಅರ್ಜಿದಾರರ ವಿಳಾಸ:-ಹೀರೇಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
5) ವಿಜಯ ಬಿನ್ ಲೇಟ್ ದ್ಯಾವಯ್ಯ, ಕೋಂ ಕೆ,ಹೆಚ್, ಕಳಸಯ್ಯ ಸುಮಾರು 70 ವರ್ಷ, ಮಲ್ಲಿಪಟ್ಟಣ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
6) ಸುಂದ್ರಮ್ಮ ಬಿನ್ ಲೇಟ್ ದ್ಯಾವಯ್ಯ ಕೋಂ ಲಕ್ಷ್ಮಣ 48ವರ್ಷ, ಬಿದರೂರ್ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ:

ವಿರುದ್ಧ

ರೆಸ್ಪಾಂಡೆಂಟರು: ತಹಸೀಲ್ದಾರರು ಹಾಗೂ ಜನನ-ಮರಣ ನೋಂದಣಾಧಿಕಾರಿಗಳು, ಅರಕಲಗೂಡು ತಾಲ್ಲೂಕು, ಅರಕಲಗೂಡು..

:: ಪತ್ರಿಕಾ ಪ್ರಕಟಣೆ :

ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ನೇ ಅರ್ಜಿದಾರರ ಗಂಡನ ಹಾಗೂ,5 & 6ನೇ ಅರ್ಜಿದಾರರ ಅಜ್ಜಿಯಾದ ಹಾಗೂ 2, 3 ಮತ್ತು 4ನೇ ಅರ್ಜಿದಾರರ ಮುತ್ತಜ್ಜಿಯಾದ ದಂಡಮ್ಮ ಕೋಂ ಲೇಟ್ ಕಳಸಯ್ಯ ರವರು ದಿನಾಂಕ 10/08/1988 ರಂದು ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಹೀರೇಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿಮೃತರಾಗಿರುತ್ತಾರೆ. ಆ ಬಗ್ಗೆ ರೆಸ್ಪಾಂಡೆಂಟರಲ್ಲಿ ಮರಣ ಧೃಢೀಕರಣ ಪತ್ರ ಕೊಡುವಂತೆ ಅರ್ಜಿ ಸಲ್ಲಿಸಿದ್ದು ರೆಸ್ಪಾಂಡೆಂಟರು ಮೃತರ ಮರಣದ ಬಗ್ಗೆ ಮರಣ ನೋಂದಣಿವಹಿಯಲ್ಲಿ ನೊಂಧಣಿಯಾಗಿರುವುದಿಲ್ಲವೆಂದು ಅಲಭ್ಯ ಪ್ರಮಾಣಪತ್ರವನ್ನು ನೀಡಿದ್ದು, ಆ ಸಂಬಂಧ 1ನೇ ಅರ್ಜಿದಾರರ ಗಂಡನ ಹಾಗೂ 5&6ನೇ ಅರ್ಜಿದಾರರ ಅಜ್ಜಿಯಾದ ಹಾಗೂ 2,3 ಮತ್ತು 4ನೇ ಅರ್ಜಿದಾರರ ಮುತ್ತಜ್ಜಿಯಾದ ದಂಡಮ್ಮ ಕೋಂ ಲೇಟ್ ಕಳಸಯ್ಯ ಇವರ ಮರಣದ ಬಗ್ಗೆ ಜನನ-ಮರಣ ನೋಂಧಣಿ ವಹಿಯಲ್ಲಿ ದಾಖಲಿಸಿಕೊಂಡು ಮೃತರ ಮರಣ ಧೃಢೀಕರಣ ಪತ್ರವನ್ನು ನೀಡುವಂತೆ ರೆಸ್ಪಾಂಡೆಂಟರಿಗೆ ಆದೇಶಿಸಲು ರೆಸ್ಪಾಂಡೆಂಟರ ವಿರುದ್ಧ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಈ ಬಗ್ಗೆ ಯಾರಿಗಾದರೂ ಹಕ್ಕು, ಹಿತಾಸಕ್ತಿ ಮತ್ತು ತಕರಾರು ಏನಾದರೂ ಇದ್ದಲ್ಲಿ ನೀವೇ ಖುದ್ದು ಹಾಜರಾತಿಯಿಂದಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ/07/08/2026 ರಂದು ಬೆಳಗ್ಗೆ 11-00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಪರ ಅಹವಾಲು ಸಲ್ಲಿಸಬವುದು. ತಪ್ಪಿದಲ್ಲಿ ನಿಮ್ಮ ಪರ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯ ತೀರ್ಮಾನ ಮಾಡಲಾಗುವುದು.

ಈ ತಿಳುವಳಿಕೆಯನ್ನು ದಿನಾಂಕ:- 23/06/2026 ಘನ ನ್ಯಾಯಾಲಯದ ಆದೇಶದನ್ವಯ ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು (ನಳರಾಜ.ಎಂ)

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಸಿವಿಲ್ ನಾಯಾಧೀಶರು
ಜೆ ಎಮ್ ಎಫ್ ಸಿ ಅರಕಲಗೂಡು

### ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ ಎಮ್ ಎಫ್ ಸಿ ರವರ ನ್ಯಾಯಾಲಯ, ಅರಕಲಗೂಡು ಸಿಆರ್.ಮಿಸ್. 521/2026

ಅರ್ಜಿದಾರರು

: 1) ಜಯಂತಿ ಕೋಂ ಲೇಟ್ ಚನ್ನಕೇಶವ@ ಚನ್ನಕೇಶವಯ್ಯ ಸುಮಾರು 48 ವರ್ಷ,
2) ಅನುರಾಧ ಹೆಚ್,ಸಿ, ಕೋಂ ಭರತ್ ಕುಮಾರ್,ಹೆಚ್,ಎನ್, ಸುಮಾರು 30 ವರ್ಷ,
3) ಮನುಕುಮಾರ ಹೆಚ್,ಸಿ,ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 28 ವರ್ಷ,
4) ಅಭಿಲಾಶ್ ಹೆಚ್,ಸಿ, ಬಿನ್ ಲೇಟ್ ಚನ್ನಕೇಶವ @ ಚನ್ನಕೇಶವಯ್ಯ ಸುಮಾರು 25 ವರ್ಷ,
1 ರಿಂದ 4ನೇ ಅರ್ಜಿದಾರರ ವಿಳಾಸ:-ಹೀರೇಹಳ್ಳಿ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
5) ವಿಜಯ ಬಿನ್ ಲೇಟ್ ದ್ಯಾವಯ್ಯ, ಕೋಂ ಕೆ,ಹೆಚ್, ಕಳಸಯ್ಯ ಸುಮಾರು 70 ವರ್ಷ, ಮಲ್ಲಿಪಟ್ಟಣ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
6) ಸುಂದ್ರಮ್ಮ ಬಿನ್ ಲೇಟ್ ದ್ಯಾವಯ್ಯ ಕೋಂ ಲಕ್ಷ್ಮಣ 48ವರ್ಷ, ಬಿದರೂರ್ ಗ್ರಾಮ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ:

ವಿರುದ್ಧ

ರೆಸ್ಪಾಂಡೆಂಟರು: ತಹಸೀಲ್ದಾರರು ಹಾಗೂ ಜನನ-ಮರಣ ನೋಂದಣಾಧಿಕಾರಿಗಳು, ಅರಕಲಗೂಡು ತಾಲ್ಲೂಕು, ಅರಕಲಗೂಡು..

:: ಪತ್ರಿಕಾ ಪ್ರಕಟಣೆ :

ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆಯಾದ ಹಾಗೂ 2,3 ಮತ್ತು 4ನೇ ಅರ್ಜಿದಾರರ ಅಜ್ಜಿಯಾದ ಮತ್ತು 5 ಮತ್ತು 6ನೇ ಅರ್ಜಿದಾರರ ತಾಯಿಯಾದ ಜವರಮ್ಮ ಕೋಂ ಲೇಟ್ ದ್ಯಾವಯ್ಯ ರವರು ದಿನಾಂಕ 08/03/1990 ರಂದು ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಹೀರೇಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಆ ಬಗ್ಗೆ ರೆಸ್ಪಾಂಡೆಂಟರಲ್ಲಿ ಮರಣ ಧೃಢೀಕರಣ ಪತ್ರ ಕೊಡುವಂತೆ ಅರ್ಜಿ ಸಲ್ಲಿಸಿದ್ದು ರೆಸ್ಪಾಂಡೆಂಟರು ಮೃತರ ಮರಣದ ಬಗ್ಗೆ ಮರಣ ನೋಂದಣಿವಹಿಯಲ್ಲಿ ನೊಂಧಣಿಯಾಗಿರುವುದಿಲ್ಲವೆಂದು ಅಲಭ್ಯ ಪ್ರಮಾಣಪತ್ರವನ್ನು ನೀಡಿದ್ದು, ಆ ಸಂಬಂಧ 1ನೇ ಅರ್ಜಿದಾರರ ಅತ್ತೆಯಾದ ಹಾಗೂ 2,3 ಮತ್ತು 4ನೇ ಅರ್ಜಿದಾರರ ಅಜ್ಜಿಯಾದ ಮತ್ತು 5 ಮತ್ತು 6ನೇ ಅರ್ಜಿದಾರರ ತಾಯಿಯಾದ ಜವರಮ್ಮ ಕೋಂ ಲೇಟ್ ದ್ಯಾವಯ್ಯ ಇವರ ಮರಣದ ಬಗ್ಗೆ ಜನನ-ಮರಣ ನೋಂಧಣಿ ವಹಿಯಲ್ಲಿ ದಾಖಲಿಸಿಕೊಂಡು ಮೃತರ ಮರಣ ಧೃಢೀಕರಣ ಪತ್ರವನ್ನು ನೀಡುವಂತೆ ರೆಸ್ಪಾಂಡೆಂಟರಿಗೆ ಆದೇಶಿಸಲು ರೆಸ್ಪಾಂಡೆಂಟರ ವಿರುದ್ಧ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಈ ಬಗ್ಗೆ ಯಾರಿಗಾದರೂ ಹಕ್ಕು. ಹಿತಾಸಕ್ತಿ ಮತ್ತು ತಕರಾರು ಏನಾದರೂ ಇದ್ದಲ್ಲಿ ನೀವೇ ಖುದ್ದು ಹಾಜರಾತಿಯಿಂದಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ 7/08/2026 ರಂದು ಬೆಳಗ್ಗೆ 11-00 ಗಂಟೆಗೆ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಪರ ಅಹವಾಲು ಸಲ್ಲಿಸಬವುದು. ತಪ್ಪಿದಲ್ಲಿ ನಿಮ್ಮ ಪರ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯ ತೀರ್ಮಾನ ಮಾಡಲಾಗುವುದು.

ಈ ತಿಳುವಳಿಕೆಯನ್ನು ದಿನಾಂಕ:-23/06/2026 ಘನ ನ್ಯಾಯಾಲಯದ ಆದೇಶದನ್ವಯ ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು (ನಳರಾಜ.ಎಂ)

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಸಿವಿಲ್ ನಾಯಾಧೀಶರು
ಜೆ ಎಮ್ ಎಫ್ ಸಿ ಅರಕಲಗೂಡು

# ಸಂಪನ್ಮೂಲ ಬಳಕೆಗೆ ಅನುಮತಿ ನೀಡದ ಸರ್ಕಾರ

## ಹಾಸನ ವಿಶ್ವವಿದ್ಯಾಲಯಕ್ಕೆ ಅಭಿವೃದ್ಧಿ ಗ್ರಹಣ | ಸಮಸ್ಯೆಗಳ ಸರಮಾಲೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿದ್ಯಾರ್ಥಿಗಳ ಪಾಲಿಗೆ ಆಶಾಕಿರಣವಾಗಬೇಕಿದ್ದ ಹಾಸನ ವಿಶ್ವವಿದ್ಯಾಲಯ ಆರಂಭವಾಗಿ ಮೂರು ವರ್ಷ ಕಳೆದರೂ ಸರ್ಕಾರದಿಂದ ಬಿಡಿಗಾಸು ಅನುದಾನ ಸಿಗದೆ ಸೊರಗುತ್ತಿದ್ದು ಆಂತರಿಕ ಅನುದಾನ ಬಳಕೆಗೂ ಅನುಮತಿ ಸಿಗದೆ ನಲುಗಿದೆ.

ಪಕ್ಕದಲ್ಲೇ ಅರಣ್ಯ ಪ್ರದೇಶ ಇರುವುದರಿಂದ ಚಿರತೆ ಮತ್ತಿತರ ಕಾಡುಪ್ರಾಣಿಗಳ ಹಾವಳಿ ಹೆಚ್ಚಿದೆ. ಸಿಬ್ಬಂದಿ ಹಾಗು ವಿದ್ಯಾರ್ಥಿಗಳ ರಕ್ಷಣೆಗೆ ಆದ್ಯತೆ ನೀಡಬೇಕಿದೆ. ವಿಶ್ವವಿದ್ಯಾಲಯದ ಜಾಗ ಸುಮಾರು 78 ಎಕರೆ ಇದ್ದು ಒತ್ತುವರಿ ಸಮಸ್ಯೆಯಿಂದ ಪಾರಾಗಬೇಕೆಂದರೆ ಸುತ್ತಲು ತಂತಿಬೇಲಿ ಹಾಕಬೇಕಿದೆ. ವಿಶ್ವವಿದ್ಯಾಲಯಕ್ಕೆ ಭವ್ಯ ಸ್ವಾಗತ ಕಮಾನು, ಅನಧಿಕೃತ ಪ್ರವೇಶ ನಿರ್ಬಂಧಕ್ಕೆ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕಿದೆ. ಪ್ರಯೋಗಾಲಯ, ಮೌಲ್ಯಮಾಪನ ಕೊಠಡಿ, ಕ್ರೀಡಾಂಗಣ ನಿರ್ಮಾಣ ತುರ್ತಾಗಿ ಆಗಬೇಕಿದೆ. ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕಿದ್ದರೂ ಸರ್ಕಾರದ ಅನುಮತಿ ಕಡ್ಡಾಯ ಎಂಬ ನಿಯಮ ಆಡಳಿತ ಮಂಡಳಿಯನ್ನು ಹೈರಾಣಾಗಿಸಿದೆ. ತಾತ್ಕಾಲಿಕವಾಗಿ 2 ಕೋಟಿ ರೂ. ಅನುದಾನ ಬೇಕಾಗಿದೆ. ಇಷ್ಟು ಕಡಿಮೆ ವೆಚ್ಚದ ಕಾಮಗಾರಿ ಕೈಗೊಳ್ಳಬೇಕೆಂದರೂ ಪೂರ್ವಾನುಮತಿ ಕಡ್ಡಾಯ ಎಂಬ ನಿಯಮ ಅಭಿವೃದ್ಧಿಗೆ ಅಡ್ಡಿಯಾಗಿದೆ.




> ಇರುವ ಅಲ್ಪ ಸಂಪನ್ಮೂಲ ಬಳಸಿಕೊಂಡು ವಿಶ್ವವಿದ್ಯಾಲಯ ಸುವ್ಯವಸ್ಥಿತವಾಗಿ ನಡೆಯುತ್ತಿದೆ. ಸರ್ಕಾರ ಇನ್ನಷ್ಟು ಪ್ರೋತ್ಸಾಹ ನೀಡಿದರೆ ವಿದ್ಯಾಲಯವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯ ಬಹುದು. ಸದ್ಯ ಆಂತರಿಕ ಸಂಪನ್ಮೂಲದಿಂದಲೇ ಕೆಲಸ ಮಾಡಲಾಗುತ್ತಿದೆ.
> -ತರೀಕೆರೆ ತಾರಾನಾಥ್, ಉಪ ಕುಲಪತಿ ಹಾಸನ ವಿಶ್ವವಿದ್ಯಾಲಯ

2023ರ ಮಾರ್ಚ್ 23ರಿಂದ ಹಾಸನ ವಿಶ್ವವಿದ್ಯಾಲಯ ಕಾರ್ಯಾರಂಭ ಮಾಡುತ್ತಿದೆ. ಅದಕ್ಕಿಂತ ಮೊದಲು ಹೇಮಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿತ್ತು. 32 ವರ್ಷಗಳ ಬಳಿಕ ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗಿದೆ. ಪ್ರಸ್ತುತ ವಿಶ್ವ ವಿದ್ಯಾಲಯ ಕ್ಯಾಂಪಸ್‌ನಲ್ಲಿ 450 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾಲಯ ವ್ಯಾಪ್ತಿಗೆ 54 ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು ಒಟ್ಟು 21 ಸಾವಿರ ವಿದ್ಯಾರ್ಥಿಗಳು ಒಳಪಡುತ್ತಾರೆ.

ಮೊದಲು ಇದ್ದ ಎಂಟು ಕೋರ್ಸ್‌ಗೆ ಹೊಸದಾಗಿ ಸ್ನಾತಕೋತ್ತರ ಸಮಾಜ ವಿಭಾಗ, ರಸಾಯನಶಾಸ್ತ್ರ ಹಾಗು ಗಣಕ ವಿಜ್ಞಾನ (ಕಂಪ್ಯೂಟರ್ ಸೈನ್ಸ್) ವಿಭಾಗ ಆರಂಭಿಸಲಾಗಿದೆ. ಕೃತಕ ಬುದ್ದಿಮತ್ತೆ, ಡೇಟಾ ಸೈನ್ಸ್ ವಿಸ್ತರಣೆಗೆ ಹೊಸ ಕೋರ್ಸ್ ಆರಂಭಿಸಲಾಗಿದೆ. ಹಳೆಯ ಎಂಟು ಹಾಗು ಹೊಸ ಮೂರು ಕೋರ್ಸ್‌ಗಳು ಸದ್ಯ ವಿಶ್ವ ವಿದ್ಯಾಲಯದಲ್ಲಿ ಇದ್ದು ಇರುವ ಸಂಪನ್ಮೂಲ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ನಡೆಯುತ್ತಿದೆ.

**23 ಕೋಟಿ ರೂ. ಅನುದಾನ**

ಆಂತರಿಕ ಸಂಪನ್ಮೂಲಗಳಿಂದಲೇ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿರುವುದ ರಿಂದ ಖಾಯಂ ಸಿಬ್ಬಂದಿ ಹೊರತುಪಡಿಸಿ ಗುತ್ತಿಗೆ ನೌಕರರ ವೇತನ ಹಾಗು ಇತರ ಖರ್ಚು ವೆಚ್ಚವನ್ನು ಸ್ಥಳೀಯವಾಗಿಯೇ ಭರಿಸಬೇಕಿದೆ. ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಿಂದ 12 ಕೋಟಿ ರೂ., ಹಾಗು ಪರೀಕ್ಷಾ ಶುಲ್ಕದಿಂದ 6.65 ಕೋಟಿ ರೂ. ಹಣ ಸಂಗ್ರಹವಾಗುತ್ತಿದೆ. ಸಿಬ್ಬಂದಿ ವೇತನ, ಕಟ್ಟಡ ನಿರ್ವಹಣೆಗೆ ವೆಚ್ಚ ಮಾಡಲಾಗುತ್ತಿದೆ.

**ಸಿಬ್ಬಂದಿ ಕೊರತೆಯೂ ಅಧಿಕ**

ಹಾಸನ ವಿಶ್ವವಿದ್ಯಾಲಯಕ್ಕೆ ಸಿಬ್ಬಂದಿ ಕೊರತೆ ಹೆಚ್ಚಾಗಿ ಕಾಡುತ್ತಿದೆ. 245 ಬೋಧಕೇತರ ಹುದ್ದೆ ಮಂಜೂರಾಗಿದ್ದರೂ ನೇರ ಪಾವತಿಯಡಿ 23 ಹಾಗು ಹೊರ ಗುತ್ತಿಗೆ ಆಧಾರದಡಿ 24 ಜನರು ಸೇರಿ 47 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಒಟ್ಟು 198 ಹುದ್ದೆ ಭರ್ತಿಯಾಗದೆ ಉಳಿದಿವೆ. ಅದೇ ರೀತಿ 27 ಬೋಧಕ ಸಿಬ್ಬಂದಿ ಹುದ್ದೆ ಮಂಜೂರಾಗಿದ್ದು 10 ಸ್ಥಾನಗಳು ಭರ್ತಿ ಯಾಗಿವೆ. ಉಳಿದಂತೆ ಅತಿಥಿ ಉಪನ್ಯಾಸಕರನ್ನೇ ವಿಶ್ವವಿದ್ಯಾಲಯ ಅವಲಂಬಿಸಿದೆ.

**ಹುಸಿಯಾದ ಸರ್ಕಾರದ ಭರವಸೆ**

2023ರಲ್ಲಿ ಹಾಸನ, ಚಾಮರಾಜನಗರ, ಮಡಿಕೇರಿ ಸೇರಿ ಆರು ಜಿಲ್ಲೆಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ ಅಂದಿನ ಬಿಜೆಪಿ ಸರ್ಕಾರ ಪ್ರತಿವರ್ಷ 2 ಕೋಟಿ ರೂ. ಅನುದಾನ ನೀಡುವ ಭರವಸೆ ನೀಡಿತ್ತು. ಆದರೆ ನಂತರ ಬಂದ ಕಾಂಗ್ರೆಸ್ ಸರ್ಕಾರ ಯಾವುದೇ ಅನುದಾನ ನೀಡಲಿಲ್ಲ. ಇಷ್ಟುಮಾತ್ರವಲ್ಲದೆ ವಿಶ್ವವಿದ್ಯಾಲಯವನ್ನೇ ರದ್ದು ಮಾಡುವ ಕುರಿತು ನಿರ್ಧಾರ ಪ್ರಕಟಿಸಿತ್ತು. ಈ ಸಂಬಂಧ ಎಲ್ಲಾ ಜಿಲ್ಲೆಗಳಲ್ಲಿ ಪ್ರಬಲ ಹೋರಾಟಗಳು ನಡೆದ ಹಿನ್ನಲೆಯಲ್ಲಿ ರದ್ದತಿ ನಿರ್ಧಾರದಿಂದ ಹಿಂದೆ ಸರಿಯಲಾಗಿತ್ತು.

# ದೇವೇಗೌಡರ ಬದುಕಿನ ಶಕ್ತಿಯಾಗಿದ್ದ ಚೆನ್ನಮ್ಮ

» ಮೊದಲನೇ ಪುಟದಿಂದ

**ಅಪರೂಪದ ದಾಂಪತ್ಯ**

72 ವರ್ಷಗಳ ಸುದೀರ್ಘ ಹಾಗು ಮಾದರಿ ದಾಂಪತ್ಯ ಜೀವನ ನಡೆಸಿದ ದೇವೇಗೌಡರು ಮತ್ತು ಚೆನ್ನಮ್ಮ ಅವರ ನಡುವೆ ಹಲವು ಸಾಮ್ಯತೆಗಳಿವೆ. ಚೆನ್ನಮ್ಮ ಅವರ ತವರು ಮನೆ ಹಾಸನ ತಾಲ್ಲೂಕಿನ ಮುತ್ತಿಗೆ ಹಿರೇಹಳ್ಳಿಯಾದರೂ, ಅವರು ಜನಿಸಿದ್ದು ತಮ್ಮ ಅಜ್ಜಿ ಮನೆಯಾದ ಹರದನಹಳ್ಳಿಯಲ್ಲಿಯೇ. ದೇವೇಗೌಡರ ಹುಟ್ಟೂರಿನಲ್ಲೇ ಚೆನ್ನಮ್ಮ ಕೂಡ ಜನಿಸಿದ್ದರು.

ಇಬ್ಬರೂ ಸಹ ತಮ್ಮ ತಂದೆಯಂದಿರ ಎರಡನೇ ಪತ್ನಿಯ ಮಕ್ಕಳು ಎಂಬುದು ವಿಶೇಷ. ದೊಡ್ಡೇಗೌಡರ ಎರಡನೇ ಪತ್ನಿ ದೇವಮ್ಮ ಅವರ ಪುತ್ರ ದೇವೇಗೌಡರಾದರೆ, ಪಟೇಲ್ ದೇವೇಗೌಡರ ಎರಡನೇ ಪತ್ನಿ ಕಾಳಮ್ಮ ಅವರ ಪುತ್ರಿ ಚೆನ್ನಮ್ಮ. ಹರದನಹಳ್ಳಿ ಹಾಗು ಮುತ್ತಿಗೆ ಹಿರೆಹಳ್ಳಿ ನಡುವೆ ಕೇವಲ 4 ಕಿ.ಮೀ ಅಂತರವಿದ್ದಿದ್ದರಿಂದ ಬಾಲ್ಯದಿಂದಲೇ ಇವರಿಬ್ಬರಿಗೂ ಪರಿಚಯವಿತ್ತು.

**ಅತಿಥಿಗಳ ಪಾಲಿನ ಅನ್ನಪೂರ್ಣೆ**

ತಮ್ಮ ಇಡೀ ಜೀವನವನ್ನು ಪತಿಯ ಏಳಿಗೆಗಾಗಿ ಪೂಜೆ,




ವ್ರತ, ಜಪ-ತಪಗಳಲ್ಲೇ ಕಳೆದ ಚೆನ್ನಮ್ಮ, ಪತಿಯ ಆರೋಗ್ಯದ ವಿಚಾರದಲ್ಲಿ ತಾಯಿಯಂತೆ ಆರೈಕೆ ಮಾಡಿದ ಕರುಣಾಮಯಿ. ದೇವೇಗೌಡರ ಮನೆಗೆ ಬರುವ ಪ್ರತಿಯೊಬ್ಬ ರಾಜಕೀಯ ಮುತ್ಸದ್ದಿ ಹಾಗು ಅತಿಥಿಗಳಿಗೆ ಸ್ವತಃ ಕೈಯಾರೆ ಅಡುಗೆ ಮಾಡಿ ಪ್ರೀತಿಯಿಂದ ಬಡಿಸುತ್ತಿದ್ದರು. ಅವರ ಕೈರುಚಿ ಸವಿದವರೆಲ್ಲರೂ ಅವರನ್ನು ಅನ್ನಪೂರ್ಣೆ ಎಂದೇ ಕರೆಯುತ್ತಿದ್ದರು.

# ಚೆನ್ನಮ್ಮ ವಿಧಿವಶ: ಹರದನಹಳ್ಳಿಯಲ್ಲಿ ನೀರವ ಮೌನ

» ಮೊದಲನೇ ಪುಟದಿಂದ

ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸುತ್ತಿದ್ದರು. ಮಹಾ ಶಿವರಾತ್ರಿ ದಿನದಂದು ಮನೆ ದೇವರು ಹರದನಹಳ್ಳಿಯ ಈಶ್ವರ ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆಯುತ್ತಿದ್ದರು. ಹಳೆಕೋಟೆಯ ಬೆಟ್ಟದ ರಂಗನಾಥ ಸ್ವಾಮಿ, ಮಾವಿನ ಕೆರೆಯಲಕ್ಷ್ಮಿವೆಂಕಟ ರಮಣನ ದರ್ಶನ ಪಡೆದು ಕಣ್ತುಂಬಿ ಕೊಳ್ಳುತ್ತಿದ್ದರು.

ಕಳೆದ ವರ್ಷ ನ್ಯಾಮನಹಳ್ಳಿಯ



ಅನಂತ್ ಕುಮಾರ್ ಬೆಟ್ಟದ ರಂಗನಾಥ ಸ್ವಾಮಿ ಸನ್ನಿಧಾನದಲ್ಲಿ ಮೂರು ದಿನಗಳ ಕಾಲ ಸಹಸ್ರ ಪುಷ್ಪಾರ್ಚನೆ, ಶತ ಶಾಂತಿ ಹೋಮ ಪೂಜಾ ಕಾರ್ಯಕ್ರಮ ದಲ್ಲಿ ಗೌಡರ ಜೊತೆ ಭಾಗಿಯಾಗಿದ್ದರು.

ತಿರುಪತಿಯ ದತ್ತಿ ಇಲಾಖೆಯ ಅಧಿಕಾರಿ ಹಾಗು ಅರ್ಚಕರ ತಂಡ ಆಗಮಿಸಿ ಹೋಮ ಹವನಗಳನ್ನು ನೆರವೇರಿಸಿದ್ದರು. ಈ ಪೂಜಾ ಕಾರ್ಯಕ್ರಮವೇ ಚೆನ್ನಮ್ಮನವರ ಅಂತಿಮ ಭೇಟಿ ಆಗಿದೆ.

# ಗಾಯಕಿ ಎಸ್.ಜಾನಕಿಗೆ ನುಡಿನಮನ

• ಪ್ರಜೋದಯ ವರದಿ

**ಆಲೂರು:** ಭಾರತ ಕಂಡ ಅತ್ಯಂತ ಕ್ರಿಯಾಶೀಲ ಗಾಯಕಿ ಎಸ್. ಜಾನಕಮ್ಮನವರು ಎಂದು ಹಾಸನ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಗೌರವಾಧ್ಯಕ್ಷ ರವಿ ನಾಕಲಗೂಡು ತಿಳಿಸಿದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಆಲೂರು ತಾಲ್ಲೂಕು ಘಟಕ, ಚೇತನ ಬಳಗ, ಕಾರ್ಯನಿರತ ಪತ್ರಕರ್ತರ ಸಂಘ, ರಾಜ್ಯ ಸರ್ಕಾರಿ ನೌಕರರ ಸಂಘ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲ್ಲೂಕು ಘಟಕ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಯನ್ಸ್ ಸಂಸ್ಥೆ, ನಾಗರೀಕರ ಹೋರಾಟ ಸಮಿತಿ ಆಲೂರು ಹಾಗೂ ವಿವಿಧ ಸಂಘಟನೆಗಳ ಸಹಕಾರದಲ್ಲಿ, ಇತ್ತೀಚೆಗೆ ಅಗಲಿದ ಬಹುಭಾಷಾ ಗಾಯಕಿ ಗಾನಕೋಗಿಲೆ ಎಸ್. ಜಾನಕಮ್ಮ ಅಗಲಿಕೆಯ ಹಿನ್ನೆಲೆಯಲ್ಲಿ, ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತದ ಪ್ರಮುಖ ಚಲನಚಿತ್ರ ಹಿನ್ನೆಲೆ ಹಾಡುಗಾತಿ. ಕನ್ನಡ, ತಮಿಳು, ತೆಲುಗು,




ಮಲಯಾಳಂ, ಒಡಿಯಾ, ಹಿಂದಿ, ಸಿಂಹಳ, ತುಳು, ಬಡಗ, ಬಂಗಾಳಿ, ಉರ್ದು, ಪಂಜಾಬಿ, ಕೊಂಕಣಿ, ಮರಾಠಿ, ಸಿಂಧಿ ಮುಂತಾದ 17ಕ್ಕೂ ಹೆಚ್ಚಿನ ಭಾರತೀಯ ಭಾಷೆಗಳಲ್ಲಿ 48,000 ಕ್ಕೂ ಹೆಚ್ಚಿನ ಹಾಡುಗಳನ್ನು ಹಾಡಿ ಜನಜನಿತವಾಗಿದ್ದಾರೆ ಎಂದು ಹೇಳಿದರು.

ನಾಲ್ಕು ಬಾರಿ ಅತ್ಯುತ್ತಮ ಹಿನ್ನೆಲೆಗಾಯಕಿ ರಾಷ್ಟ್ರ ಪ್ರಶಸ್ತಿ ಪಡೆದಿರುವ ಎಸ್.ಜಾನಕಿ, ವಿವಿಧ ರಾಜ್ಯಗಳಿಂದ 28ಕ್ಕೂ ಹೆಚ್ಚಿನ ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ತಮ್ಮ ವೃತ್ತಿಜೀವನದಲ್ಲಿ ಅತಿ ಹೆಚ್ಚು ಹಾಡುಗಳನ್ನು ಜಾನಕಿಯವರು ಕನ್ನಡ ಭಾಷೆಯಲ್ಲಿ ಹಾಡಿದ್ದಾರೆ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಚೇತನ ಬಳಗದ ಸಂಸ್ಥಾಪಕ ಅಧ್ಯಕ್ಷ ಎಂ.ಪಿ.ಹರೀಶ್, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್ ಉಪ್ಪಾರ್, ತಾಲ್ಲೂಕು ಅಧ್ಯಕ್ಷ ಮಣಿಪುರ ಕೃಷ್ಣೇಗೌಡ, ತಾಲ್ಲೂಕು ನಾಗರೀಕರ ಹೋರಾಟ ಸಮಿತಿ ಅಧ್ಯಕ್ಷ ಕೆ.ಎಸ್.ಮಂಜೇಗೌಡ, ತಾಲ್ಲೂಕು ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಡಿ. ಎಂ. ವರದರಾಜು, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ. ಆರ್.ಶ್ರೀನಿವಾಸ, ಒಕ್ಕಲಿಗರ ಸಂಘದ ಖಜಾಂಚಿ ಶಾಂತಕೃಷ್ಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಎಂ. ಬಾಲಕೃಷ್ಣ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಎಂ.ಈ. ಜಯರಾಜ್, ತಾಲ್ಲೂಕು ಲಯನ್ಸ್ ಸಂಸ್ಥೆ ಅಧ್ಯಕ್ಷ ಟಿ.ಆನಂದ, ವೇದಿಕೆ ಕಾರ್ಯದರ್ಶಿ ಧರ್ಮ ಕೆರಲೂರು, ತಾಲೂಕು ಮಹಿಳಾ ಕಾರ್ಯದರ್ಶಿ ಚಂದ್ರಕಲಾ ಎಂ. ಶಿಕ್ಷಕರಾದ ಅಣ್ಣಪ್ಪ ಇನ್ನಿತರರು ಹಾಜರಿದ್ದರು.

# ಜನರ ಕುಂದುಕೊರತೆ ನಿವಾರಣೆಗೆ ಪ್ರಜಾಸೇವಾ ಇಲಾಖೆ

## ಸಿಎಂ ನಿರ್ದೇಶನದಂತೆ ಹೋಬಳಿ ಕೇಂದ್ರದಲ್ಲೂ ಜನಸ್ಪಂದನಾ ಕಾರ್ಯಕ್ರಮ: ಡಿ.ಸಿ.

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆಗಾಗಿ ಪ್ರಜಾಸೇವಾ ಇಲಾಖೆ ಎಂದು ಪ್ರತ್ಯೇಕ ಸಚಿವಾಲಯವನ್ನು ಸೃಜಿಸಿದೆ. ಜನ ಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದು, ಜನರ ಅಹವಾಲುಗಳನ್ನು ಆಲಿಸಿ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದರು.

ತಾಲ್ಲೂಕಿನ ದುದ್ದ ಪ್ರೌಢಶಾಲೆಯ ಆಟದ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಜನ ಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ನಿರ್ದೇಶನದಂತೆ ಪ್ರತಿ ತಿಂಗಳ ಮೊದಲ ಶನಿವಾರ ತಾಲ್ಲೂಕು ಕಚೇರಿಯಲ್ಲಿ ಹಾಗು ಮೂರನೇ ಶನಿವಾರ ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ಹೋಬಳಿ ಕೇಂದ್ರದಲ್ಲಿ ನಡೆಸುತ್ತಿರುವುದು ಸಾರ್ವಜನಿಕರಿಗೆ ಸಹಕಾರಿಯಾಗಲಿದೆ ಎಂದರು.

ಜನ ಸ್ಪಂದನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಹಾಗು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆಸಲಾಗುತ್ತಿತ್ತು,



ಹೋಬಳಿ ಮಟ್ಟದಲ್ಲಿ ನಡೆಸಲು ಮುಖ್ಯಮಂತ್ರಿ ಅವರು ನಿರ್ದೇಶನ ನೀಡಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ದುದ್ದ ಹೋಬಳಿಯಿಂದ ಪ್ರಾರಂಭಿಸಲಾಗಿದೆ ಎಂದರು.

ಸಾರ್ವಜನಿಕರ ಸಮಸ್ಯೆಗಳ ತಾತ್ವಿಕ ಹಾಗು ಕಾನೂನಾತ್ಮಕ ಪರಿಹಾರಕ್ಕೆ ಕ್ರಮಕ್ಕೆಗೊಳ್ಳಲಾಗುವುದು. ಜನರು ಸಮಸ್ಯೆಗಳನ್ನು ಒತ್ತು ಜಿಲ್ಲಾ ಹಾಗು ತಾಲ್ಲೂಕು ಕಚೇರಿಗಳಿಗೆ ಬರುವುದರ ಬದಲಾಗಿ ಅಧಿಕಾರಿಗಳೇ ತಮ್ಮ ಬಳಿ ಬರುತ್ತಿರುವುದರಿಂದ ಸಾರ್ವಜನಿಕರಿಗೆ ನೆರವಾಗುತ್ತದೆ. ಇಂದಿನ ಜನ ಸ್ಪಂದನ ಕಾರ್ಯಕ್ರಮದಲ್ಲಿ ಖಾತೆ, ದುರಸ್ತಿ, ಸರ್ವೆ, ರಸ್ತೆ, ಸಾಗುವಳಿ ಚೀಟಿ, ಪರಿಹಾರ, ದಾರಿ ಒತ್ತುವರಿ, ಬಸ್ ನಿಲುಗಡೆ, ಬಸ್ ಸೌಲಭ್ಯ ಸೇರಿ ಒಟ್ಟು 55 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಅರ್ಜಿಗಳ ವಿಲೇವಾರಿಯ ಪ್ರಗತಿ ಪರಿಶೀಲನೆ ಮತ್ತು ಸ್ಥಿತಿಗತಿಗಳನ್ನು ಮರುಪರಿಶೀಲನೆ ಮಾಡಲಾಗುವು ದೆಂದು ತಿಳಿಸಿದರು.

ಜಿಲ್ಲಾಡಳಿತ ಜಿಲ್ಲೆಯನ್ನು ಹಸಿರು ಹಾಸನವನ್ನಾಗಿ ಮಾಡುವ ನಿಟ್ಟಿನಲ್ಲಿ 5 ಲಕ್ಷ ಗಿಡಗಳನ್ನು ನೆಡುವ ಗುರಿ ಹೊಂದಲಾಗಿದ್ದು, ಈಗಾಗಲೇ 3.50 ಲಕ್ಷ ಗಿಡಗಳನ್ನು ನೆಡಲಾಗಿದೆ. ಕೆರೆ-ಕುಂಟೆ, ಶಾಲಾ- ಕಾಲೇಜುಗಳ ಆವರಣದಲ್ಲಿ ಗಿಡಗಳನ್ನು ನೆಡಲು ಎಲ್ಲರೂ ಕೈಜೋಡಿಸುವ ಮೂಲಕ ಹೆಚ್ಚಿನ ಪ್ರಗತಿಗೆ ಸಹಕಾರ ನೀಡುವಂತೆ ತಿಳಿಸಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಈಗಾಗಲೇ ಮತಗಟ್ಟೆ ಅಧಿಕಾರಿಗಳು ಎನ್ಯುಮೆರೇಷನ್ ನಮೂನೆಗಳನ್ನು ವಿತರಿಸಿದ್ದಾರೆ, ನಮೂನೆಗಳನ್ನು ಭರ್ತಿ ಮಾಡುವುದು ಬಹಳ ಸರಳವಾಗಿದೆ. ಗೊಂದಲಗಳಿಗೆ ಅವಕಾಶವಿಲ್ಲದಂತೆ ಮತಗಟ್ಟೆ ಅಧಿಕಾರಿಗಳ ಸಹಾಯ ಪಡೆದು ಎನ್ಯುಮೆರೇಷನ್ ನಮೂನೆಗಳನ್ನು ಭರ್ತಿ ಮಾಡಿ ಹಿಂದಿರುಗಿಸುವಂತೆ ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಶಾಲಾ ಆವರಣದಲ್ಲಿ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಗಿಡ ನೆಟ್ಟು ಈ ಸಂದರ್ಭದಲ್ಲಿ ಸ್ಥಳದಲ್ಲಿಯೇ ಇದ್ದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಡಲು ಹಾಗೂ ಶಾಲಾ ಆವರಣಕ್ಕೆ ತಂತಿ ಬೇಲಿ ನಿರ್ಮಾಣಕ್ಕೆ ಕ್ರಮ ವಹಿಸಲು ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿ ಹೆಚ್.ಕೆ. ಕೃಷ್ಣಮೂರ್ತಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ್, ತಹಶೀಲ್ದಾರ್ ಗೀತಾ ಉಪಸ್ಥಿತರಿದ್ದರು.

> **ಮಕ್ಕಳು ಎಲ್ಲೇ ಕೈ ತೋರಿಸಿದರೂ ಬಸ್ ನಿಲ್ಲಿಸಿ**
> ಜಿಲ್ಲೆಯಲ್ಲಿ ಶಾಲಾ ಮಕ್ಕಳು ಎಲ್ಲಿಯೇ ಬಸ್‌ಗೆ ಕೈ ತೋರಿಸಿದರೂ ಬಸ್ ನಿಲ್ಲಿಸಿ ಮಕ್ಕಳನ್ನು ಹತ್ತಿಸಿಕೊಳ್ಳುವಂತೆ ಒಂದು ಸುತ್ತೋಲೆ ಹೊರಡಿಸಲು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಪ್ರೌಢಶಾಲೆಯ ಜಾಗ ಒತ್ತುವರಿ ಆಗಿರುವುದನ್ನು ತೆರವುಗೊಳಿಸಲು ಹಾಗು ಕಾಂಪೌಂಡ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

## ಮನೆ ಕಳ್ಳತನ ಅಪರಾಧಿಗೆ 6 ವರ್ಷ ಜೈಲು ಶಿಕ್ಷೆ

• ಪ್ರಜೋದಯ ವರದಿ

**ಬೇಲೂರು:** ಪ್ರತ್ಯೇಕ ಪ್ರಕರಣಗಳಲ್ಲಿ ಮನೆಗಳವು ಮಾಡಿ ಪರಾರಿಯಾಗಿದ್ದ ಅಪರಾಧಿಗೆ ಆರು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ತಾಲ್ಲೂಕು ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಸುರೇಶ್ ಅಪರಾಧಿ. 2024ರ ಜು.29ರಂದು ತಾಲ್ಲೂಕಿನ ಮಂಡಲ ಮನೆ ಹಾಗು ವಾಗಿನಕೆರೆ ಗ್ರಾಮದ ಮನೆಗಳಲ್ಲಿ ಕಳ್ಳತನ ಮಾಡಿದ್ದ.

ಮಂಡಲಮನೆಯ ರವಿಗೌಡ ಎಂಬುವವರ ಮನೆಗೆ ನುಗ್ಗಿದ್ದ ಸುರೇಶ್ ಬೀರುವಿನಲ್ಲಿದ್ದ 140 ಗ್ರಾಂ ತೂಕದ ಮೂರು ಚಿನ್ನದ ಗುಂಡಿನ ಸರ, 10 ಗ್ರಾಂ ತೂಕದ ಚಿನ್ನದ ಓಲೆ, 20 ಗ್ರಾಂನ ಬೆಳ್ಳಿಯ ಆಭರಣಗಳನ್ನು ಕಳವು ಮಾಡಿದ್ದ. ಮತ್ತೊಂದು ಪ್ರಕರಣದಲ್ಲಿವಾಗಿನ ಕೆರೆಯ ಸುರೇಶ್ ಎಂಬುವವರ ಮನೆಯಲ್ಲಿ 10 ಗ್ರಾಂ ಚಿನ್ನಾಭರಣ ಹಾಗು 5 ಸಾವಿರ ರೂ. ನಗದು ಕಳವು ಮಾಡಿ ಪರಾರಿಯಾಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀ ಸರು ನ್ಯಾಯಾಲಯಕ್ಕೆ ದೋಷಾರೋ ಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಬೇಲೂರು ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯವು ಅಪರಾಧಿಗೆ 6 ವರ್ಷ ಸಾದಾ ಕಾರಾಗೃಹ ಶಿಕ್ಷೆ ಹಾಗು 20 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕಿ ಶಶಿಕಲಾ ಅವರು ವಾದ ಮಂಡಿಸಿದ್ದರು.

# ಸೋನಂ ವಾಂಗ್ಚುಕ್ ಬೆಂಬಲಿಸಿ ನಾಳೆ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನೀಟ್ ಪರೀಕ್ಷೆ ಅಕ್ರಮದ ವಿರುದ್ಧ ಅಮರಣಾಂತ ಉಪವಾಸ ನಡೆಸುತ್ತಿರುವ ಸೋನಂ ವಾಂಗ್ಚುಕ್ ಅವರನ್ನು ಬೆಂಬಲಿಸಿ ಜು.20 ರಂದು ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಲೆ ನಾಡು ಪರಿಸರ ಹೋರಾಟ ಸಮಿ ತಿಯ ಕಿಶೋರ್ ಕುಮಾರ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ನೀಟ್ ಹಾಗು ಜೆಇಇ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮಗಳ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಜುಲೈ 20 ರಂದು ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆ ಬಳಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಗುವುದೆಂದು ಹೇಳಿದರು.

ದೇಶದ ಲಕ್ಷಾಂತರ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣದ ಕನಸನ್ನು ನನಸಾಗಿ ಸಿಕೊಳ್ಳಲು ಹಗಲಿರುಳು ಶ್ರಮಿಸಿ ನೀಟ್ ಹಾಗು ಜೆಇಇ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಾರೆ. ಪ್ರಶ್ನೆಪತ್ರಿಕೆ ಸೋರಿಕೆ ಹಾಗು ಪರೀಕ್ಷಾ ಅಕ್ರಮಗಳು ಅವರ ಪರಿಶ್ರಮಕ್ಕೆ ಧಕ್ಕೆ ತಂದು, ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಗ್ಗಿಸಿವೆ. ಇಂತಹ ಘಟನೆಗಳಿಂದ ಅನೇಕ ವಿದ್ಯಾರ್ಥಿಗಳು ಮಾನಸಿಕ ಆಘಾತಕ್ಕೆ ಒಳಗಾಗಿರುವುದು ಕಳವಳಕಾರಿ ಎಂದರು.




ಪರೀಕ್ಷಾ ಅಕ್ರಮಗಳಿಗೆ ಸಂಬಂಧಿ ಸಿದ ನೈತಿಕ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಶಿಕ್ಷಣ ಸಚಿವರು ಹೊತ್ತುಕೊಳ್ಳಬೇಕು. ದೇಶದ ಶಿಕ್ಷಣ ವ್ಯವಸ್ಥೆಯ ವಿಶ್ವಾಸಾರ್ಹತೆ ಕಾಪಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಹಿನ್ನಲೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇ ಕೆಂಬುದು ವಿದ್ಯಾರ್ಥಿ ಸಮುದಾ ಯದ ಪ್ರಮುಖ ಬೇಡಿಕೆ ಯಾಗಿದೆ. ಇದೇ ಬೇಡಿಕೆಯನ್ನು ಮುಂದಿಟ್ಟು ಶಿಕ್ಷಣ ಪ್ರೇಮಿ ಸೋನಂ ವಾಂಗ್ಚುಕ್ ದೆಹಲಿಯ ಜಂತರ್-ಮಂತರ್‌ನಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯ ಮತ್ತು ನ್ಯಾಯಯುತ ಪರೀಕ್ಷಾ ವ್ಯವಸ್ಥೆಗಾಗಿ ನಡೆಯು ತ್ತಿರುವ ಈ ಹೋರಾಟಕ್ಕೆ ದೇಶದ ಜನತೆ ಬೆಂಬಲ ನೀಡಬೇಕೆಂದರು.

ಸಾಮಾಜಿಕ ಜಾಲತಾಣಗಳಲ್ಲಿ ಬೆಂಬಲ ವ್ಯಕ್ತಪಡಿಸಿದರೆ ಸಾಕಾಗು ವುದಿಲ್ಲ. ಶಿಕ್ಷಣ ವ್ಯವಸ್ಥೆ ಸುಧಾ ರಣೆಗಾಗಿ ಜನರು ನೇರವಾಗಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ತಮ್ಮ ಧ್ವನಿಯನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಪಾರದರ್ಶಕ ಪರೀಕ್ಷಾ ವ್ಯವಸ್ಥೆಗಾಗಿ ನಡೆಯುತ್ತಿರುವ ಈ ಹೋರಾಟದಲ್ಲಿ ಸಾರ್ವ ಜನಿಕರು, ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಚಿತ್ರಕಲಾವಿದ ಬಿ.ಎಸ್.ದೇಸಾಯಿ, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್.ವಿಜಯ ಕುಮಾರ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಎಂ.ಜಿ.ಪೃಥ್ವಿ, ಸಿಐಟಿಯು ಕಾರ್ಯ ದರ್ಶಿ ಅರವಿಂದ್, ಪತ್ರಕರ್ತ ಚಲಂ ಹಾಡ್ಲಹಳ್ಳಿ ಇದ್ದರು.

# ಶಿವಾನಂದ ತಗಡೂರು ವಿರುದ್ಧ ಸುಳ್ಳು ಸುದ್ದಿ: ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹಾಗೂ ಮಾನಹಾನಿಕರ ಮಾಹಿತಿಯನ್ನು ಹರಿಬಿಟ್ಟು ಸಾರ್ವಜನಿಕರನ್ನು ದಾರಿ ತಪ್ಪಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜ್ ನೇತೃತ್ವದ ಪದಾಧಿಕಾರಿಗಳ ತಂಡವು ಶನಿವಾರ ಬೇಲೂರು ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕ ರೇವಣ್ಣ ಅವರಿಗೆ ದೂರು ಸಲ್ಲಿಸಿ ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜ್, ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಹಿರಿಯ ಪತ್ರಕರ್ತರಾಗಿದ್ದು, ಪತ್ರಕರ್ತರ ಹಕ್ಕುಗಳ ರಕ್ಷಣೆ, ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಪತ್ರಕರ್ತರ ಕುಟುಂಬಗಳಿಗೆ ಆರ್ಥಿಕ ನೆರವು ಸೇರಿದಂತೆ ಅನೇಕ ಜನಪರ ಕಾರ್ಯಗಳನ್ನು ಕೈಗೊಂಡಿರುವ ಅವರ ಬೆಳವಣಿಗೆಯನ್ನು ಸಹಿಸದ ಕೆಲ ಕಿಡಿಗೇಡಿಗಳು ದುರುದ್ದೇಶಪೂರ್ವಕವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಿಬಿಡುತ್ತಿದ್ದಾರೆ ಎಂದು ದೂರಿದರು.




ವಿಶೇಷವಾಗಿ ಬೇಲೂರು ಸುದ್ದಿಗಳು ಎಂಬ ಸಾಮಾಜಿಕ ಜಾಲತಾಣದ ಗುಂಪಿನಲ್ಲಿ ಬಸವರಾಜ್ ಎಂಬ ವ್ಯಕ್ತಿ, ಶಿವಾನಂದ ತಗಡೂರು ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂಬ ಸುಳ್ಳು ಪೋಸ್ಟರ್ ಹಂಚಿಕೊಂಡಿರುವುದು ಗಮನಕ್ಕೆ ಬಂದಿದೆ. ಈ ರೀತಿಯ ಸುಳ್ಳು ಮಾಹಿತಿ ಸಮಾಜದಲ್ಲಿ ಗೊಂದಲ ಉಂಟು ಮಾಡುವುದರ ಜೊತೆಗೆ ಸಂಘದ ಹಾಗೂ ರಾಜ್ಯಾಧ್ಯಕ್ಷರ ಘನತೆಗೆ ಧಕ್ಕೆ ತರುವ ಪ್ರಯತ್ನವಾಗಿದೆ. ಆದ್ದರಿಂದ ಸಂಬಂಧಪಟ್ಟವರ ವಿರುದ್ಧ ಸಮಗ್ರ ತನಿಖೆ ನಡೆಸಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಎಲ್. ಲಕ್ಷ್ಮಣ್, ಖಜಾಂಚಿ ಲೋಹಿತ್, ಜಿಲ್ಲಾ ನಿರ್ದೇಶಕ ಮಲ್ಲೇಶ್, ಪದಾಧಿಕಾರಿಗಳಾದ ಅರುಣ್ ಕುಮಾರ್, ಹರೀಶ್, ರಮೇಶ್, ಸಂದೀಪ್ ಹಾಗೂ ಪ್ರಗತಿ ಲೋಕೇಶ್ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರದಲ್ಲಿ ಶಾಸಕ ಎ.ಮಂಜು ಅಭಿಮತ

# ಶಿಕ್ಷಣವಂತರಲ್ಲಿ ಸಮಾಜ ಸುಧಾರಣೆಯ ಪರಿಕಲ್ಪನೆ ಮೂಡಬೇಕು

• ಪ್ರಜೋದಯ ವರದಿ

**ಅರಕಲಗೂಡು:** ಶಿಕ್ಷಣವಂತರಲ್ಲಿ ಸಮಾಜ ಸುಧಾರಣೆಯ ಪರಿಕಲ್ಪನೆ ಮೂಡಬೇಕಿದೆ. ಆಗ ಮಾತ್ರ ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ ಕಾಣಲು ಸಾಧ್ಯ ಎಂದು ಶಾಸಕ ಎ. ಮಂಜು ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಪ್ರಥಮ ಪಿಯು ವಿದ್ಯಾರ್ಥಿಗಳ ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳಲ್ಲಿ ಉತ್ತಮ ಜ್ಞಾನ, ಪ್ರತಿಭೆ ಮತ್ತು ಸಾಮರ್ಥ್ಯ ಅಡಗಿರುತ್ತದೆ. ಪಿಯು ಶಿಕ್ಷಣ ಪಡೆಯುವ ಹಂತದಲ್ಲಿ ಈ ಅವಕಾಶ ಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಶಿಕ್ಷಣದ ಮೂಲಕವೇ ಸಮಾಜದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ ಎಂದರು.


ಪಟ್ಟಣ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಾಲಕಿಯರ ಕಾಲೇಜು ಉತ್ತಮ ಶಿಕ್ಷಣ ನೀಡುವಲ್ಲಿ ತಾಲ್ಲೂಕಿನಲ್ಲಿಯೇ ಹೆಸರು ಪಡೆದಿದೆ. ವಿದ್ಯಾರ್ಥಿಗಳು ಶಿಸ್ತು, ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ವಿದ್ಯಾಭ್ಯಾಸ ಮಾಡಿ ತಂದೆ-ತಾಯಿ, ಗುರುಗಳು ಹಾಗೂ ಶಿಕ್ಷಣ ಸಂಸ್ಥೆಗೆ ಕೀರ್ತಿ ತರಬೇಕು. ಉತ್ತಮ ನಾಗರಿಕರಾಗಿ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಅವರು ಕಿವಿಮಾತು ಹೇಳಿದರು.



ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನದಾಗಿ ರೈತರ ಮನೆಯ ಹೆಣ್ಣು ಮಕ್ಕಳೇ ವಿದ್ಯಾಭ್ಯಾಸ ಮಾಡುತ್ತಾರೆ. ರೈತರ ಸಂಕಷ್ಟದ ಬಗ್ಗೆ ಮಕ್ಕಳಿಗೆ ಗೊತ್ತಿರುತ್ತದೆ. ಆದರೂ ಕೂಡ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಹಿಂದೇಟು ಹಾಕುತ್ತಿರುವುದು ಬೇಸರದ ಸಂಗತಿ. ಕೃಷಿ ಮತ್ತು ರೈತರ ಬದುಕಿಗೆ ಸಮಾಜ ಹೆಚ್ಚಿನ ಗೌರವ ನೀಡಬೇಕೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಪ್ರಾಂಶುಪಾಲ ಅನಂತ ರಾಜು, ಸಿಡಿಸಿ ಉಪಾಧ್ಯಕ್ಷ ಮಂಜುಶೆಟ್ಟಿ ಗೌಡ, ಇತರರು ಇದ್ದರು.

## 70 ಗ್ರಾಂ ತೂಕದ ಚಿನ್ನಾಭರಣ ಕಳವು



ಚನ್ನರಾಯಪಟ್ಟಣ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡು ಒಳ ನುಗ್ಗಿರುವ ಕಳ್ಳರು 70 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಆರತಿ ಕೋಡಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ದ್ರಾಕ್ಷಾಯಿಣಿ ಅವರು ಜು.16ರಂದು ಮನೆಗೆ ಬೀಗ ಹಾಕದೆ ಕೇವಲ ಚಿಲಕ ಹಾಕಿಕೊಂಡು ತಮ್ಮದೇ ಚಿಲ್ಲರೆ ಅಂಗಡಿಗೆ ತೆರಳಿದ್ದರು. ಉಪಹಾರ ಸೇವಿಸಲೆಂದು ಕೆಲ ಹೊತ್ತಿನ ಬಳಿಕ ವಾಪಾಸ್ಸಾದಾಗ ಮನೆ ಬಾಗಿಲು ತೆರೆದಿರುವುದು ಗೊತ್ತಾಗಿದೆ. ಕೋಣೆಯಲ್ಲಿನ ವಸ್ತು ಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಕದ್ದಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸೋನಂ ವಾಂಗ್ಚುಕ್ ಉಪವಾಸ: ಕೇಂದ್ರದ ವಿರುದ್ಧ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಸೋನಂ ವಾಂಗ್ಚುಕ್ ಹಾಗು ಉಪವಾಸನಿರತ ಇತರೆ ಹೋರಾಟಗಾರರನ್ನು ಬಲ ವಂತವಾಗಿ ಎಳೆದುಕೊಂಡು ಹೋಗಿರುವ ಸರ್ಕಾರ, ಪೊಲೀಸರ ಕ್ರಮವನ್ನು ಖಂಡಿಸಿ, ಎಐಡಿಎಸ್‌ಒ ವತಿಯಿಂದ ನಗರದ ಹೇಮಾವತಿ ಪ್ರತಿಮೆ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚೈತ್ರ ಅವರು ಮಾತನಾಡಿ, ಎನ್ ಇಇಟಿ-ಯುಜಿ ಪರೀಕ್ಷೆಯಲ್ಲಿನ ಅಕ್ರಮದ ಹಿನ್ನಲೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ದೇಶವ್ಯಾಪಿ ಹೋರಾಟಗಳು ನಡೆಯುತ್ತಿವೆ. ಎನ್ಇಇಟಿ ಪರೀಕ್ಷೆ ಸೇರಿ ಎನ್‌ಟಿಎ ನಡೆಸಿದ ಪ್ರಮುಖ ಪರೀಕ್ಷೆಗಳಲ್ಲಿ ನಡೆದಿರುವ ಸರಣಿ ಅಕ್ರಮಗಳು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲೆಗೆ ದೂಡಿದೆ. ಈ ವರ್ಷ ಪರೀಕ್ಷೆ ರದ್ದಾದ ನಂತರ ಕೇವಲ ಒಂದೇ ತಿಂಗಳ ಅವಧಿಯಲ್ಲಿ 23 ವಿದ್ಯಾರ್ಥಿಗಳು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ ಎಂದು ದೂರಿದರು.



ದೇಶದಲ್ಲಿ ನಡೆಯುತ್ತಿರುವ ಚಳುವಳಿಯ ಭಾಗವಾಗಿ ಶಿಕ್ಷಣ ತಜ್ಞ, ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಮತ್ತು ಇತರೆ ಹೋರಾಟಗಾರರು ನಡೆಸುತ್ತಿರುವ ಉಪವಾಸ ಸತ್ಯಾಗ್ರ ಹವು 20ನೇ ದಿನಕ್ಕೆ ಕಾಲಿಟ್ಟಿದೆ. ಈಗಾಗಲೇ ಅವರ ಆರೋಗ್ಯ ತೀರಾ ಹದಗೆಟ್ಟಿದೆ. ಇಷ್ಟಾದರೂ ಕೇಂದ್ರ ಸರ್ಕಾರವಾಗಿರಲಿ ಅಥವಾ ಶಿಕ್ಷಣ ಸಚಿವರಾಗಿರಲಿ ಅವರೊಂದಿಗೆ ಯಾವುದೇ ಪ್ರಜಾತಾಂತ್ರಿಕ ಸಂವಾದವನ್ನು ಮಾಡದಿರುವುದು ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ತೋರಿಸುತ್ತದೆಂದು ಆಕ್ಷೇಪ ವ್ಯಕ್ತಪಡಿಸಿದರು.

ಯಾವುದೇ ರೀತಿಯ ಪ್ರಜಾತಾಂತ್ರಿಕ ಚರ್ಚೆ ನಡೆಸದೆ ಸೋನಂ ವಾಂಗ್ಚುಕ್ ಹಾಗು ಇತರೆ ಉಪವಾಸನಿರತ ಹೋರಾಟಗಾರರನ್ನು ಬಲವಂತವಾಗಿ ಎಳೆದುಕೊಂಡು ಹೋಗಿರುವ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರಿ ಧೋರಣೆಯನ್ನು ಎಐಡಿಎಸ್‌ಒ ಖಂಡಿಸುತ್ತದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಸುಷ್ಮಾ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಅಹವಾಲು ಸ್ವೀಕರಿಸುವುದು ಸರ್ಕಾರದ ಕರ್ತವ್ಯವಾಗಿದೆ. ಜನರು ಸಚಿವಾಲಯದಿಂದ ಉತ್ತರದಾಯಿತ್ವವನ್ನು ಕೇಳುತ್ತಿರುವಾಗ, ಜನರ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಸರ್ಕಾರ ಈ ರೀತಿ ದಮನಕಾರಿ ನೀತಿ ಅನುಸರಿಸುತ್ತಿರುವುದು ಪ್ರಜಾತಂತ್ರಕ್ಕೆ ಬಗೆದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಸೋನಂ ವಾಂಗ್ಚುಕ್ ಮತ್ತು ಇತರೆ ಹೋರಾಟಗಾರರೊಂದಿಗೆ ಪ್ರಜಾಸತ್ತಾತ್ಮಕ ಚರ್ಚೆಗಳಿಗಾಗಿ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿದರು.

ತಿಲಕ್, ನಫುಸಾ ಬಾನು ಹಾಗು ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಸಾರ್ವ ಜನಿಕರು ಭಾಗವಹಿಸಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK